# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol XIX - 9 ಸೆಪ್ಟೆಂಬರ್ 2001

### ಈ ಸಂಚಿಕೆಯಲ್ಲಿ


| | | |
|---|---|---|
| ಅಸೋಸಿಯೇಷನ್ನಿನಲ್ಲಿ ಸ್ವರ್ಣಗೌರಿ ಮತ್ತು ಗಣಪತಿ ಉತ್ಸವ | • ರಮಾವಸಂತ | 2 |
| ಜಿ.ವಿ. ರಂಗಸ್ವಾಮಿ ಅವರ ಅನೂನ ಕನ್ನಡ ಪ್ರೇಮ | • ಡಾ. ಜಿ. ಎನ್. ಉಪಾಧ್ಯ | 4 |
| 'ಬಾರೊ ಸಾಧನಕೇರಿಗೆ' ಎಂದು ಕರೆಯುತ್ತಿದೆ ಡಾ. 'ಜೀವಿ' | • ಡಾ. ಜಿ. ಎನ್. ಉಪಾಧ್ಯ | 5 |
| **Interview :** Revered Swami Muktidanandaji of Ramakrishna Vidyashala, Mysore | • **Prasad** | 8 |
| Let it be, let Malgudi be | | 11 |
| ಸುತ್ತ-ಮುತ್ತ | | 12 |


**The Mysore Association, Mumbai**
393, Bhaudaji Road, Matunga, Mumbai-400 019.
Tel.: 402 46 47 • Grams: "KARUNADU"

# ಅಸೋಸಿಯೇಷನ್ನಿನಲ್ಲಿ ಸ್ವರ್ಣಗೌರಿ ಮತ್ತು ಗಣಪತಿ ಉತ್ಸವ

ಗೌರಿ ಹಬ್ಬ ಎಂದರೆ ಹೆಣ್ಣು ಮಕ್ಕಳಿಗೆ ಸಂಭ್ರಮವೋ ಸಂಭ್ರಮ. ಅದರಲ್ಲೂ ಹೊಸದಾಗಿ ಮದುವೆ ಆದ ಹೆಣ್ಣು ಮಕ್ಕಳಿಗೆ ಒಂದೇ ಉತ್ಸಾಹ. ಯಾಕೆಂದರೆ ತವರು ಮನೆಗೆ ಹೋಗಲು ಒಂದು ಸುವರ್ಣಾವಕಾಶ. ಶಿವನ ಮಡದಿ ಪಾರ್ವತಿ ದೇವಿಯೂ ಸಹ ಈ ಸಂದರ್ಭದಲ್ಲಿ ತವರಿಗೆ ಹೋಗುತ್ತಾಳೆ ಎಂದು ಕಥೆಯಲ್ಲಿ ಹೇಳುತ್ತಾರೆ. ಭಾದ್ರಪದ ಶುದ್ಧ ತದಿಗೆ ಗೌರಿಹಬ್ಬ ಆಗುತ್ತದೆ. ಈ ವರ್ಷ ಆಗಸ್ಟ್ 21ರಂದು ಗೌರಿಹಬ್ಬ, ಹಿಂದಿನ ದಿನವೇ ಗೌರಮ್ಮನನ್ನು ಆರತಿಯೊಡನೆ ಬರಮಾಡಿಕೊಂಡು ಮಂಟಪದಲ್ಲಿ ಕುಳ್ಳಿರಿಸಿದರು. ಹಬ್ಬದ ದಿನ ಮಂಟಪದಲ್ಲಿ ಶಾಸ್ತ್ರೋಕ್ತವಾಗಿ ಪ್ರತಿಷ್ಠಾಪಿಸಿ ಅಸೋಸಿಯೇಷನ್ನಿನ ಸದಸ್ಯೆಯರು ಪುರೋಹಿತರ ಮಾರ್ಗ ದರ್ಶನದಲ್ಲಿ ವೇದ ಮಂತ್ರೋಕ್ತಗಳಿಂದ ಪೂಜಿಸಿ, ದಾರವನ್ನು ಕಟ್ಟಿಕೊಂಡು ಗೌರಿಗೆ ಮರದ ಜೊತೆಯನ್ನು ಅರ್ಪಿಸಿ ಆಕೆಯ ಆಶೀರ್ವಾದವನ್ನು ಪಡೆದರು. ಪ್ರಸಾದ ವಿನಿಯೋಗವಾಯಿತು.

ಮರುದಿನ ಗಣಪತಿಯ ಪೂಜೆ, ಗಣಪತಿಯ ಮೂರ್ತಿಯನ್ನೂ ಸಹ ಆರತಿ ಹಾಗೂ ಜೈಕಾರಗಳ ಘೋಷಣೆಯಿಂದ ಬರಮಾಡಿಕೊಂಡರು. ಬುಧವಾರ 23ರಂದು ಬೆಳಿಗ್ಗೆ 10 ಘಂಟೆಗೆ ಪೂಜೆಯು ಆರಂಭವಾಯಿತು. ಗಣಪತಿಗೆ ಪೂಜೆ ಪಂಚಾಮೃತ ಅಭಿಷೇಕ ಎಲ್ಲವನ್ನೂ ಮಾಡಿದ ನಂತರ ಪ್ರಸಾದ ವಿನಿಯೋಗ, ಸಂಜೆ ಗಣಪತಿಗೆ ಮಂಗಳಾರತಿ, ಆರತಿ ಎಲ್ಲವೂ ಶಾಂಗವಾಗಿ ನಡೆಯಿತು. 'ವಿಘ್ನ ವಿನಾಶಕ' 'ಸಿದ್ಧಿವಿನಾಯಕ'... ಹೀಗೆ ಅನೇಕ ಹೆಸರುಗಳ್ಳ ಗಣಪತಿ. ಮೊದಲು ಗಣಪತಿಯನ್ನು ಸ್ತುತಿಸುತ್ತಾರೆ. ಕಾರ್ಯವು ನಿರ್ವಿಘ್ನವಾಗಿ ನಡೆಯಲೆಂದು.

ಗುರುವಾರದಿಂದ ಸಂಜೆಯ ಹೊತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನೇರ್ಪಡಿಸಿದ್ದರು. 23 ಗುರುವಾರದಂದು ಬೆಂಗಳೂರಿನ ಶ್ರೀ ಟಿ.ಎನ್. ಅಶೋಕ್‌ರವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತವಿತ್ತು. ಇವರು ಬಳ್ಳಾರಿಯ ಶೇಷಗಿರಿ ಸ್ತುತಿ.



ಗಣಪತಿ ಹಾಗೂ ಗೌರಮ್ಮನ ಮೂರ್ತಿ

'ನಂತರ ಎರಡು ತ್ಯಾಗರಾಜರ ಕೃತಿಗಳು ನಂತರ ಆರಭಿರಾಗದಲ್ಲಿ 'ಹರಿದಾಸರ ಸಂಗ' ಎಂಬ ದಾಸರ ಕೃತಿ. ನಂತರ ಷಣ್ಮುಖನನ್ನು ಕುರಿತು 'ವಳ್ಳಿ ಮನೋಹರನೆ' ಎಂಬ ಕೃತಿಯನ್ನು ಹಾಡಿದರೆ, ನಂತರ ರಾಘವೇಂದ್ರ ಸ್ವಾಮಿಗಳ ಕುರಿತು ಒಂದು ಕೃತಿ, ಕಬೀರದಾಸರ ಒಂದು ರಚನೆ, ಪುರಂದರದಾಸರ 'ಕಾಗದ ಬಂದಿದೆ' ಎಂಬ ಕೃತಿಯು ಪ್ರೇಕ್ಷಕರ ಮೆಚ್ಚುಗೆಗಳಿಸಿತು. ಕಮಲನಾಭನ ಕಾಗದದಲ್ಲಿ ಏನು ಬರೆದಿದೆ? 'ಕಾಮ, ಕ್ರೋಧ, ಹೆಣ್ಣು, ಹೊನ್ನು ಮತ್ತು ಮಣ್ಣಿನಾಸೆಯನ್ನು ಬಿಟ್ಟು ಹೆಜ್ಜೆ ಹೆಜ್ಜೆಗೂ ಹರಿ ಎನ್ನಿರಿ, ಎಂಬ ಬುದ್ಧಿಮಾತಿನ ಕಾಗದ, ದಾಸರ ಪದಗಳು ಬಹಳ ಅರ್ಥಗರ್ಭಿತವಾಗಿವೆ. ನಂತರ ದಾಸರ 'ರಾಮನಾಮ ಪಾಯಸ'ದ ರಸದೌತಣ ವನ್ನುಣಿಸಿ ಮಂಗಳದೊಂದಿಗೆ ಮುಕ್ತಾಯವಾಯಿತು.

ಇವರೊಂದಿಗೆ ಪಕ್ಕ ವಾದ್ಯದಲ್ಲಿ 'ಶ್ರೀ ರಾಮಚಂದ್ರನ್' ಪಿಟೀಲು, 'ಶ್ರೀ ಕೆ.ಬಿ. ಗಣೇಶ್' ಮೃದಂಗ ಹಾಗೂ ಶ್ರೀ ಮಹೇಶ್‌ರವರು ಘಟವನ್ನು ನುಡಿಸಿದರು. ಈ ಸಂಗೀತ ಕಾರ್ಯಕ್ರಮದ ನಂತರ ಗಣಪತಿಗೆ ಪೂಜೆ, ಮಹಾಮಂಗಳಾರತಿ ಆಗಿ ಪ್ರಸಾದ ವಿನಿಯೋಗದೊಂದಿಗೆ ಕಾರ್ಯಕ್ರಮವು ಮುಗಿಯಿತು.

ಶುಕ್ರವಾರ 24ರಂದು ಸಂಜೆ ಅಸೋಸಿಯೇಷನ್ನಿನ ಮಹಿಳಾ ವಿಭಾಗದ 'ಅರಿಶಿನ - ಕುಂಕುಮ' ಕಾರ್ಯಕ್ರಮದ ನಂತರ ಶ್ರೀ ಬಾಳಿಗಾ ಸಹೋದರರಿಂದ ಹಿಂದೂಸ್ತಾನಿ ಶೈಲಿಯಲ್ಲಿ ಕೊಳಲು ವಾದನದ ಕಛೇರಿ ನಡೆಯಿತು. ಶ್ರೀ ಅಮೃತ್ ದೇಸಾಯಿ ಅವರು ಕಲಾವಿದರನ್ನು ಪರಿಚಯಿಸಿದರು.

ಶ್ರೀ ರಾಘವೇಂದ್ರ ಬಾಳಿಗಾ ಅವರ ಮೊದಲ ಗುರು, ತಾಯಿ ಶ್ರೀಮತಿ ಸುಶೀಲಾ ಬಾಳಿಗಾ ನಂತರ 'ಪರಶುರಾಮ ಹಳ್ಳಿಪುರ್' ಮತ್ತು 'ಪಂಡಿತ್ ಮಲ್ಲಾರ್ ರಾವ್ ಕುಲಕರ್ಣಿ ಇವರು ತಮ್ಮ ಚಿಕ್ಕ ವಯಸ್ಸಿನಲ್ಲೇ ಅನೇಕ ಬಹುಮಾನಗಳನ್ನು ಗಳಿಸಿದ್ದಾರೆ. 'ಕರ್ನಾಟಕ ಅಂತರ್ ವಿಶ್ವ ವಿದ್ಯಾಲಯ'ದ ಸಂಗೀತ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ, ದಕ್ಷಿಣ ವಲಯದ ಅಂತರ್ ವಿಶ್ವವಿದ್ಯಾಲಯದ (ಕರ್ನಾಟಕ)ದಲ್ಲಿ ಮೊದಲ



ಶ್ರೀಮತಿ ವಿ. ಜಯಲಕ್ಷ್ಮಿನಾಥನ್ ಮತ್ತು ಸಂಗಡಿಗರಿಂದ ಸಂಗೀತ.



ಶ್ರೀ ರಾಘವೇಂದ್ರ ಬಾಳಿಗಾ ಅವರ ಕೊಳಲು ವಾದನ



ಶ್ರೀ ಚಿನ್ಮಯ ನಾದಬಿಂದು ಸಂಗಡಿಗರಿಂದ ಭಕ್ತಿಗೀತೆಗಳ ಕಾರ್ಯಕ್ರಮ.

ಬಹುಮಾನ, 10ನೇ ಯುವ ಸಂಗೀತ ಮಹೋತ್ಸವ ಮೈಸೂರು ಇಲ್ಲಿ ಎರಡನೇ ಬಹುಮಾನ, ಹೀಗೆ ಇನ್ನೂ ಅನೇಕ ಬಹುಮಾನಗಳು ಬಂದಿವೆ. ವಿದೇಶ ಗಳಲ್ಲೂ ಕಾರ್ಯಕ್ರಮವನ್ನು ನೀಡಿದ್ದಾರೆ. ಮುಂಬೈನಲ್ಲಿ ಅನೇಕ ಕಡೆಗಳಲ್ಲಿ ಇವರು ಕಾರ್ಯ ಕ್ರಮವನ್ನು ನಡೆಸಿದ್ದಾರೆ. 'ಹೇಮಮಾಲಿನಿ' 'ಸಿತಾರದೇವಿ' 'ಬಿರ್ಜು ಮಹಾರಾಜ್' 'ಹರಿಹರನ್' ಮೊದಲಾದವರಿಗೆ ನುಡಿಸಿದ್ದಾರೆ.

ಇವರು ವಾಡಿಕೆಯಂತೆ ಹಂಸಧ್ವನಿ ರಾಗದಲ್ಲಿ 'ವಾತಾಪಿ ಗಣಪತಿಂ...' ಎಂಬ 'ದೀಕ್ಷಿತರ' ಕೃತಿಯನ್ನು ನುಡಿಸಿದರು. ನಂತರ 'ಬೇಹಾಗ್' ರಾದಲ್ಲಿ ಒಂದು ಕೃತಿಯನ್ನು ನುಡಿಸಿದರು. ನಂತರ ಇನ್ನು 2-3 ಕೃತಿಗಳನ್ನು ನುಡಿಸಿ ಕಾರ್ಯಕ್ರಮವನ್ನು ಮುಗಿಸಿದರು.

ಇವರೊಂದಿಗೆ ಪಕ್ಕವಾದ್ಯದಲ್ಲಿ ಸಹೋದರ 'ಶ್ರೀ ರಘುವೀರ ಬಾಳಿಗಾ'ರವರು ತಬಲ ನುಡಿಸಿದರು. ವೃತ್ತಿಯಲ್ಲಿ ಇವರು 'ಇಂಜಿನಿಯರ್' ಆಗಿದ್ದಾರೆ. ಅನೇಕ ಕಲಾವಿದರೊಡನೆ ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ. ನಂತರ ಗಣಪತಿಗೆ ಪೂಜೆ ಮತ್ತು ಮಹಾಮಂಗಳಾರತಿ ಆಗಿ ಪ್ರಸಾದ ವಿನಿಯೋಗ ವಾಯಿತು.

ಶನಿವಾರ 25ರಂದು ಸಂಜೆ ಶ್ರೀಮತಿ ವಿಜಯಲಕ್ಷ್ಮೀನಾಥನ್ ಮತ್ತು ಸಂಗಡಿಗರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಶ್ರೀಮತಿ ವಿಜಯಲಕ್ಷ್ಮೀನಾಥ'ನ್'ರವರು ನಮ್ಮ ಅಸೋಸಿಯೇಷನ್ನಿಗೆ ಬಹಳ ಚಿರಪರಿಚಿತರು. ಸಂಗೀತ ಕುಟುಂಬಕ್ಕೆ ಸೇರಿದವರು. ತಮ್ಮ 12ನೆಯ ವಯಸ್ಸಿನಿಂದ ಕಛೇರಿಗಳನ್ನು ಕೊಡಲಾರಂಭಿಸಿದ್ದಾರೆ. ಆಕಾಶ ವಾಣಿಯಲ್ಲಿ ಹಿರಿಯ ಕಲಾವಿದೆ, ಇವರು ಅಸೋಯಿಯೇಷನ್ನಿನಲ್ಲಿ ಕಳೆದ 50 ವರ್ಷಗಳಿಂದ ಸತತವಾಗಿ ಹಾಡಿ ಒಂದು ಅಪರೂಪದ ದಾಖಲೆಯನ್ನು ಸ್ಥಾಪಿಸಿದ್ದಾರೆ.

'ಏರಾನಾ ಪೈ' ಎಂಬ ವರ್ಣದಿಂದ ಕಛೇರಿಯು ಆರಂಭವಾಯಿತು. ''ಪ್ರಣಾಮಾಮ್ಯಹಂ'' ಎಂಬ ಗಣಪತಿಯ ಸ್ತುತಿಯನ್ನು ಹಾಡಿದರು. ನಂತರ 'ಹಿಂದೋಳ' ರಾಗದಲ್ಲಿ 'ಮಾಮವತುಶ್ರೀ... ಸರಸ್ವತಿ' ಎಂಬ ಸರಸ್ವತಿಯ ಕುರಿತ ಶ್ರೀ ವಾಸುದೇವಾಚಾರ್ಯರ ರಚನೆಯನ್ನು ಶ್ರೋತೃಗಳ ಮನಮುಟ್ಟುವಂತೆ ಹಾಡಿದರು. ಸಂಗೀತವೇ ಮನಸ್ಸಿಗೆ ಮುದ ನೀಡುತ್ತದೆ. ಅವರಲ್ಲೂ ಹಿಂದೋಳ, ಅಠಾಣ, ಕಾನಡ ಮೊದಲಾದ ರಾಗಗಳು ಮನ ಮಿಡಿಯುತ್ತವೆ. 'ಜಾಲಂಧರ ಸುಪೀಠ', 'ಶೋಭಿಲ್ಲ ಸಪ್ತಸ್ವರ' ಮೊದಲಾದ ಕೃತಿಗಳನ್ನು ಹಾಡಿದರು. ''ವಿಘ್ನೇಶ್ವರ ವಿಮಲ ಗಜಾನನ'' ಎಂಬ ಕೃತಿ, ಪಲ್ಲವಿಯನ್ನು ವಿಸ್ತಾರದಲ್ಲಿ ಹಾಡಿದರು. ಬಳಿಕ ''ದೇವನಕಿ ಪತಿ ಇಂದ್ರ'' ಎಂಬ ತಮಿಳು ರಚನೆ, ದೇವತೆಗಳ ಅದಿಪತಿ ಇಂದ್ರ, ಪಕ್ಷಿಗಳ ಅಧೀಪತಿ 'ಹಂಸ' ಋತುಗಳ ಅಧಿಪತಿ 'ವಸಂತ' ರಾಗದ ಅಧಿಪತಿ ಕಾನಡ ಹೀಗೆ ಅನೇಕ ಅಧಿಪತಿಗಳ ಕುರಿತ ರಚನೆ. ಇದು, ಮತ್ತೆರಡು ಕೃತಿಗಳನ್ನು ಹಾಡಿ ಮಂಗಳದೊಂದಿಗೆ ಕಾರ್ಯ ಕ್ರಮವನ್ನು ಮುಗಿಸಿದರು. ವೇಳೆಯ ಅಭಾವದಿಂದ ಪುರಂದರ ದಾಸರ ಕೃತಿಯನ್ನು ಹೇಳಲಾಗಲಿಲ್ಲ.

ಇವರೊಂದಿಗೆ ಸಹಗಾಯನದಲ್ಲಿ ಶಿಷ್ಯೆಯರಾದ ಶ್ರೀಮತಿ ಕವಿತಾ ಪ್ರದೀಪ್ ಹಾಗೂ ಕುಮಾರಿ 'ಶೀಲಾ' ಹಾಡಿದರು, ಪಕ್ಕವಾದ್ಯದಲ್ಲಿ 'ಶ್ರೀ ಬಾಲಕೃಷ್ಣ' ಪಿಟೀಲು ಹಾಗೂ ಶ್ರೀ ಶ್ರೀಧರ್ ಪಾರ್ಥಸಾರಥಿ ಮೃದಂಗ ನುಡಿಸಿದರು. ನಂತರ ಮಹಾ ಮಂಗಳಾರತಿ ಹಾಗೂ ಪ್ರಸಾದ ವಿನಿಯೋಗ ವಾಯಿತು.

ಇನ್ನು 26 ಭಾನುವಾರದಂದು ಉತ್ಸವದ ಕೊನೆಯದಿನ. ಗಣಪತಿಯ ವಿಸರ್ಜನೆ. ವಿಸರ್ಜನೆಯು ಆವಾಹನೆಗಿಂತ ಹೆಚ್ಚಿನ ಸಂಭ್ರಮದಿಂದ ಕೂಡಿರುತ್ತದೆ. ಅಂದು ಬೆಳಗ್ಗೆ 9 ಘಂಟೆಗೆ ರುದ್ರಾಭಿಷೇಕ, 10 ಘಂಟೆಗೆ ಶಂಕರ ಮಠದ ಋತ್ವಿಕರಿಂದ ವೇದಘೋಷ ನಡೆಯಿತು.

(ಪುಟ 7ಕ್ಕೆ)



ಗೌರಮ್ಮ ಹಾಗೂ ಗಣಪತಿಯನ್ನು ಮೆರವಣಿಗೆಯಲ್ಲಿ ವಿಸರ್ಜನೆಗೆ ಕರೆದೊಯ್ಯುತ್ತಿರುವುದು.

FOR ALL YOUR DOMESTIC AND INTERNATIONAL TRAVEL ARRANGEMENTS
CONTACT
AUGUST TRAVEL SERVICE
Agents For
INDIAN AIRLINES & JET AIRLINES
REGD. OFFICE :
3/15, ASHIANA, SECTOR 17,
VASHI, NAVI MUMBAI
PHONES : 789 1970 * 789 1972
789 2451
GRAMS : AUGTRASERV
ALSO AT :
2/16, KABBUR HOUSE,
SION (E), MUMBAI-400 022.
PHONES : 407 2984 * 409 3573
407 7750

# ಜಿ.ವಿ. ರಂಗಸ್ವಾಮಿ ಅವರ ಅನೂನ ಕನ್ನಡ ಪ್ರೇಮ

ಕನ್ನಡದ ಕಟ್ಟಾಳುವಾಗಿದ್ದ ಜಿ.ವಿ. ರಂಗಸ್ವಾಮಿ ಅವರು ಕಳೆದವಾರ ಮುಂಬಯಿಯಲ್ಲಿ ನಿಧನರಾದರು. ಎಲ್ಲಾದರು ಇರು ಎಂತಾದರು ಇರು ಎಂದೆಂದಿಗೂ ನೀ ಕನ್ನಡವಾಗಿರು ಎಂಬ ಕುವೆಂಪುರವರ ವಾಣಿಯನ್ನು ವ್ರತವಾಗಿ ಅವರು ಸ್ವೀಕರಿಸಿದ್ದರು. ಮುಂಬಯಿಯ ಸಾಂಸ್ಕೃತಿಕ ರಂಗದಲ್ಲಿ ಹಾಸು ಹೊಕ್ಕಾಗಿದ್ದ, ಮುಂಚೂಣಿಯಲ್ಲಿದ್ದ ಅವರು ಇಲ್ಲಿ ಕನ್ನಡವನ್ನು ಮುನ್ನೆಸಿದ ಹಿರಿಯರು. 'ನ ಭೂತೋ ನ ಭವಿಷ್ಯತಿ' ಎನ್ನುವ ಹಾಗೆ ಹೊರನಾಡಿಲ್ಲಿದ್ದೂ ಐವತ್ತು ಬಾರಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪಾಲ್ಗೊಂಡು ಮನೆ ಮಾತಿನ ಋಣ ಸಂದಾಯ ಮಾಡಿದವರು.

ಕನ್ನಡ ಸಾರಸ್ವತ ಪ್ರಪಂಚದ ಅನೇಕ ಘಟಾನುಘಟಿಗಳ ಸ್ನೇಹ ವಿಶ್ವಾಸಕ್ಕೆ ಅವರು ಪಾತ್ರರಾಗಿದ್ದರು. ಕನ್ನಡ ದೈತ್ಯ ಪ್ರತಿಭೆಗಳಾದ ಕುವೆಂಪು, ಬೇಂದ್ರೆ, ಸಿಂಪಿ ಲಿಂಗಣ್ಣ, ಚದುರಂಗ, ಗೋರೂರು, ಕೈಲಾಸಂ, ಶ್ರೀರಂಗ, ಅ.ನ.ಕೃ, ಮಾಸ್ತಿ, ಡಿ.ವಿ.ಜಿ., ಬಿ.ಎಂ. ಶ್ರೀ ಮೊದಲಾದವರೊಂದಿಗೆ ಅವರು ನಿಕಟ ಸಂಪರ್ಕವನ್ನಿಟ್ಟುಕೊಂಡಿದ್ದರು. ಪತ್ರಕರ್ತರಾಗಿ ಅವರು ಕೆಲಕಾಲ ದುಡಿದರು. ಸ್ವತಃ ಮೈಸೂರು ಪ್ರೆಸ್ ತೆರೆದು ಕನ್ನಡ ಪ್ರಕಟಣೆಗೆ ಆದ್ಯತೆ ನೀಡಿದರು. ಆ ಮೂಲಕ ಅನೇಕ ಲೇಖಕರನ್ನು ಲೋಕ ಮುಖಕ್ಕೆ ಪರಿಚಯಿಸಿದರು. ಆದರ್ಶ ಎಂಬ ಪತ್ರಿಕೆಯನ್ನು ಹುಟ್ಟು ಹಾಕಿ ಏಳು ವರ್ಷಗಳ ಕಾಲ ಅದನ್ನು ನಡೆಸಿದರು. ಖ್ಯಾತ ಕನ್ನಡ ಸಾಹಿತಿ ಚದುರಂಗರ ಮೊದಲಕತೆ ಪ್ರಕಟವಾದುದು ದೂರದ ಮುಂಬಯಿಯಲ್ಲಿ. ಅದೂ ರಂಗಸ್ವಾಮಿ ಅವರ 'ಆದರ್ಶ ಪತ್ರಿಕೆಯಲ್ಲಿ'.

ಅನೂನ ಕನ್ನಡ ಪ್ರೇಮಿಯಾಗಿ, ಸಾಮಾಜಿಕ ಹಿತ ಚಿಂತಕರಾಗಿ ಕನ್ನಡ ಹಿತಾಸಕ್ತಿಗೆ ಬಹುದೊಡ್ಡ ಬೆಂಬಲವಾಗಿ ನಿಂತರು. ಇಳಿ ವಯಸ್ಸಿನಲ್ಲೂ ಕ್ರಿಯಾಶೀಲ ಬದುಕನ್ನು ಬಾಳಿದರು. ಓರ್ವ ಕನ್ನಡ ಸೇವಕನಾಗಿ ಹಿರಿಕಿರಿಯ ಕಾರ್ಯಕರ್ತರ ನಡುವೆ ಕೊಂಡಿಯಾಗಿ ನಾಡಿನಾದ್ಯಂತ ಓಡಾಡಿದರು. ಅಪರಿಮಿತ ಜೀವನೋತ್ಸಾಹ,ಸದಾ ಜಾಗೃತವಾಗಿದ್ದ ಚಿಕಿತ್ಸಕ ಬುದ್ಧಿ, ಬದುಕಿನ ಕೊನೆಯ ಕ್ಷಣಗಳ ವರೆಗೂ ಏನಾದರೂ ಹೊಸದನ್ನು ಕಲಿಯಬೇಕು, ತಿಳಿಯಬೇಕು ಎಂಬ ಕುತೂಹಲ, ಋಜು ಜೀವನದ ಸಾತ್ವಿಕ ಬದುಕು ಅವರದಾಗಿತ್ತು. ಮುಂಬಯಿಯಲ್ಲಿ ಸದ್ದುಗದ್ದಲವಿಲ್ಲದೆ , ಯಾವುದೇ ಪ್ರಚಾರದ ಗೀಳು ಅಂಟಿಸಿಕೊಳ್ಳದೆ ಯಾವುದೇ ತತ್ತ್ವ, ಸಿದ್ಧಾಂತಕ್ಕೆ ಜೋತು ಬೀಳದೆ ಸಂಗೀತ, ಕಲೆ,ಸಾಹಿತ್ಯ ಹೀಗೆ ಸಾಂಸ್ಕೃತಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ತಮ್ಮ ಬೆಂಬಲಿಗರ ಗುಂಪುಕಟ್ಟಿಕೊಳ್ಳದೆ ತೆರೆಯ ಮರೆಯಲ್ಲಿದ್ದುಕೊಂಡೇ ಕನ್ನಡದ ಕೈಂಕರ್ಯವನ್ನು ಪ್ರಾಂಜಲ ಮನಸ್ಸಿನಿಂದ ಮಾಡಿದರು. ಅವರು ಸ್ನೇಹ ಜೀವಿ. ಕನ್ನಡ ನಾಡು ನುಡಿಯ ಆರಾಧಕರಾಗಿದ್ದರು. ಅಧ್ಯಾತ್ಮ ಸಾಧಕ, ಪರೋಪಕಾರಿ. ಒಂದು ಬದುಕಿನಲ್ಲಿ ಇಷ್ಟೆಲ್ಲ ವೈವಿಧ್ಯತೆಗಳನ್ನು ಅಳವಡಿಸಿಕೊಂಡಿದ್ದರು.

ರಂಗಸ್ವಾಮಿ ಅವರು ಬರೇ 'ಆದರ್ಶ'ದ ಸಂಪಾದಕರಾಗಿ ಮಾತ್ರ ಕೆಲಸಮಾಡಿದ್ದಲ್ಲ. ಅವರದು 'ಆದರ್ಶ'ಗಳಿಗಾಗಿ ತೇದುಕೊಂಡ ಅರ್ಥಪೂರ್ಣ ಜೀವನ. ಹಾಗೆ ನೋಡಿದರೆ ಸಂಪ್ರದಾಯಸ್ಥ ಮನೆತನದಿಂದ ಬಂದವರು; ಆದಾಗ್ಯೂ ಹೊಸಕಾಲದ ಬದುಕಿಗೆ ಬೆನ್ನು ಹಾಕಿದವರಲ್ಲ. ರಂಗಸ್ವಾಮಿ ಅವರು ಹೋದರು ಜೊತೆಗೆ 'ಆದರ್ಶ' ಹಾಗೂ ಕೆಲವು ಮೌಲ್ಯಗಳನ್ನು ತಮ್ಮೊಂದಿಗೆ ಕೊಂಡು ಹೋದರು. ನಾವು ಬಡವಾದೆವು. ಅವರು ತೋರಿದ ದಾರಿ, ಬಾಳಿದ ಬದುಕು, ಆ ನೆನಹು ನಮಗೆಲ್ಲ ಚೇತೋಹಾರಿಯಾಗಿದೆ.

ಅವರು ನಿರ್ಮಾತ್ಸರ್ಯದ ಸುವಿಚಾರಿಗಳು. ಸಂಘ ಸಂಸ್ಥೆಗಳ ಅಧ್ಯಕ್ಷನಾಗಿಯೋ ಅಧಿಕಾರಿಯಾಗಿಯೋ ಕಾರುಬಾರು ನಡೆಸಿದವರಲ್ಲ. ಮುಂಬಯಿ ಕನ್ನಡ ಸಂಘದಲ್ಲಿ ಕೆಲಕಾಲ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದನ್ನು ಬಿಟ್ಟರೆ ಮತ್ತೆಲ್ಲೂ ಅವರು ನೇತಾರರಾದುದಿಲ್ಲ. ಅವರು ಒಳ್ಳೆಯ ಪ್ರತಿನಿಧಿ. ಡೊಂಬಿವಲಿಯಿಂದ ಹಿಡಿದು ಬೊರಿವಲಿಯ ವರೆಗೆ ಎಲ್ಲೇ ಕನ್ನಡ ಕಾರ್ಯಕ್ರಮ ನಡೆಯಲಿ, ಆಮಂತ್ರಣ ಇರಲಿ ಇಲ್ಲದಿರಲಿ ರಂಗಸ್ವಾಮಿ ಅವರು ಅಲ್ಲಿ ಹಾಜರ್. ಆರಂಭದಿಂದ ಕೊನೆಯವರೆಗೆ ಕುಳಿತು ಕೇಳಿ ಕಾರ್ಯಕ್ರಮದ ಬಳಿಕ ಅದರ ಸಾಧಕ ಬಾಧಕಗಳನ್ನು ಮುಕ್ತವಾಗಿ ಹಂಚಿಕೊಂಡು ಬಾಯಿತುಂಬಾ ಮಾತನಾಡಿ ಮರಳುವುದು ಅವರ ಪದ್ಧತಿ. ಮುಂಬಯಿಯಲ್ಲಿ ಕನ್ನಡ ಚಟುವಟಿಕೆ ಗರಿಗೂಡಬೇಕಾದ ದಿನಗಳಲ್ಲಿ ಅವರು ಕನ್ನಡ ಕೆಲಸದ ಕೇಂದ್ರವಾಗಿದ್ದರು. ''ನಾನು ಪಂಡಿತನಲ್ಲ, ಸಾಹಿತಿಯೂ ಅಲ್ಲ. ನಾನೊಬ್ಬ ಸಾಮಾನ್ಯ ಮನುಷ್ಯ. ನಾನೊಬ್ಬ ಸಹೃದಯಿ'' ಎಂದವರು ಹೇಳುತ್ತಿದ್ದುದುಂಟು. ದೂರದ ಮುಂಬಯಿಯಲ್ಲಿ ಇದ್ದುಕೊಂಡೂ ಸಾಹಿತ್ಯ ಪರಿಷತ್ತಿನ ಆಗುಹೋಗುಗಳನ್ನು, ಸಾಹಿತಿಗಳ ಮೂಲ ಚೂಲವನ್ನು ಅವರು ಬಲ್ಲವರಾಗಿದ್ದರು. ಸಾಹಿತ್ಯ ಸಮ್ಮೇಳನಗಳು ಇಂದು ಜಾತ್ರೆಯಂತಾಗುತ್ತಿದೆಯಲ್ಲ ಎಂಬ ಪ್ರಶ್ನೆಗೆ' ಅದರಲ್ಲಿ ತಪ್ಪೇನಿದೆ? ವರ್ಷಕ್ಕೆ ಒಂದು ಬಾರಿ ಕನ್ನಡ ಪ್ರೇಮಿಗಳು, ಸಾಹಿತ್ಯ ಪ್ರಿಯರು ಒಟ್ಟಾಗಿ ಸೇರಲು ಇದೊಂದು ಸದಾವಕಾಶ. ಇದಕ್ಕೂ ಸಂಚಕಾರ ತಂದರೆ ಹೇಗೆ? ನಾಡಿನ ಮೂಲೆಯಲ್ಲಿ ಕನ್ನಡ ಜಾಗೃತಿಯನ್ನು ಮೂಡಿಸುವಲ್ಲಿ ಈ ಸಮ್ಮೇಳನಗಳ ಪಾತ್ರ ಹಿರಿದಾದುದೆಂದು ಅವರು ಬಲವಾಗಿ ನಂಬಿದ್ದರು. ಮರಾಠಿ ಮಿತ್ರರು ನಡೆಸುವ ಸಾಹಿತ್ಯ ಸಮ್ಮೇಳನವು ನಮಗೆ ಆದರ್ಶವಾಗಬೇಕೆಂಬ ನಿಲುವು ಅವರದಾಗಿತ್ತು. ''ಮುಂಬಯಿಯಲ್ಲಿ ಕನ್ನಡಿಗರಲ್ಲಿ ಕನ್ನಡತನವನ್ನು ಉತ್ತೇಜಿಸಲು ಎಷ್ಟು ಪ್ರಯತ್ನಗಳಾದರೂ ಕಡಿಮೆಯೇ'' ಎನ್ನುತ್ತಿದ್ದರು. 'ಕನ್ನಡ' ಅವರಿಗೆ ಅನ್ನ ಉಸಿರುಗಳಷ್ಟೇ ಮುಖ್ಯವಾಗಿತ್ತು. ಅವರು ಬಾಳಿದ ಜೀವನ ಮೌಲ್ಯಗಳು ಇಂದಿನ ಸಮಾಜದಲ್ಲಿ ಸಿಗುವಂಥವಲ್ಲ. ರಂಗಸ್ವಾಮಿ ಅವರ ಸಾತ್ವಿಕ, ಸೌಮ್ಯ, ಸರಳ - ವಿರಳ ವ್ಯಕ್ತಿತ್ವವನ್ನು ನಾವು ಅಭಿಮಾನದಿಂದ ಸದಾ ನೆನೆಯಬೇಕು. ಕನ್ನಡದ ಕವಿಯೊಬ್ಬ 'ಕಟ್ಟೆಯುಮನೊ ಮಾಲೆಗಾರನ ಪೊಸಬಾಸಿಗಂ ಬಾಡಿ ಪೋಗದೆ ಮುಡಿದ ಭೋಗಿಗಳಿಲ್ಲದೆ' ಎಂದು ಪ್ರಶ್ನಿಸಿದ. ಜಿ.ವಿ. ರಂಗಸ್ವಾಮಿ ಅವರಂಥವರಿದ್ದರೆ ನಮ್ಮ ನಾಡು ನುಡಿಗೆ ಯಾವ ಭಯವೂ ಇಲ್ಲ. ಅವರ ಹಾದಿ ಹೆಜ್ಜೆ ನಮಗೆ ಮಾರ್ಗದರ್ಶಿ.

- ಡಾ. ಜಿ. ಎನ್. ಉಪಾಧ್ಯ, ಮುಂಬಯಿ

TRIMURTI
JEWELLERS
GOLD AND DIAMOND
ORNAMENTS

460/4, Venkatesh Niwas,
Ground Floor,
Bhaudaji Road,
Opp Mysore Association,
Matunga (C.Rly.) Mumbai-19.

Phone : 402 34 85

# ‘ಬಾರೊ ಸಾಧನಕೇರಿಗೆ’ ಎಂದು ಕರೆಯುತ್ತಿವೆ ಡಾ. ‘ಜೀವಿ’

✍ ಡಾ. ಜಿ. ಎನ್. ಉಪಾಧ್ಯ

ಮುಂಬಯಿಯ ಸಾಂಸ್ಕೃತಿಕ ಬದುಕಿನಲ್ಲಿ ಹಾಸುಹೊಕ್ಕಾದವರಲ್ಲಿ ಡಾ. ಜೀವಿ ಕುಲಕರ್ಣಿ ಅವರು ಒಬ್ಬರು. ಅವರದು ಬಹುಮುಖಿ ಪ್ರತಿಭೆ. ಕವಿಯಾಗಿ, ವಿಮರ್ಶಕರಾಗಿ, ನಾಟಕಕಾರರಾಗಿ, ಅಂಕಣಕಾರರಾಗಿ, ಗೆಳೆಯರ ಗುಂಪಿನ ಕೊಂಡಿಯಾಗಿ, ಪ್ರಾಧ್ಯಾಪಕರಾಗಿ ಹಾಗೂ ಇತ್ತೀಚೆಗೆ ಯೋಗಾರಾಧಕರಾಗಿ ಹೆಸರು ಮಾಡಿದ್ದಾರೆ. ಅವರ ಪರಿಣತಿ ಪರಿಶ್ರಮ ಹತ್ತಾರು ಕ್ಷೇತ್ರಗಳಲ್ಲಿ ವ್ಯಾಪಿಸಿದೆ. ಆಪ್ತ ದಾಟಿಯಲ್ಲಿ ಓದುಗನನ್ನು ತಲುಪುವ ದೊಡ್ಡ ಗುಣ ಅವರ ಬರವಣಿಗೆಯ ವೈಶಿಷ್ಟ್ಯ. ಅವರ ಕಾವ್ಯದ ಅನನ್ಯತೆ ಪ್ರಕಟವಾಗಿರುವುದು ಅದರ ಭಾವಗೀತಾತ್ಮಕತೆಯಲ್ಲಿ. ಬೇಂದ್ರೆ ಅವರಿಂದ ಕಾವ್ಯ ನಾಮ ಪಡೆದುಕೊಂಡ ಜೀವಿ ಅವರ ಕಾವ್ಯ ರಚನಾ ವ್ಯವಸಾಯ ತಡೆಯಿಲ್ಲದೆ ಸಾಗಿತು. ಹುಚ್ಚಾಹುಚ್ಚಿ ಅವರಿಗೆ ಕನ್ನಡ ಸಾಹಿತ್ಯ ಲೋಕದಲ್ಲಿ ಸದಾ ಮಿನುಗುವ ಸ್ಥಾನವನ್ನು ತಂದುಕೊಟ್ಟಿದೆ. ಬೇಂದ್ರೆ - ಗೋಕಾಕರನ್ನು ಕುರಿತು ಅಧಿಕೃತವಾಗಿ ಆತ್ಮೀಯವಾಗಿ ಬರೆದಿರುವ ಜೀವಿ ಅವರ ಸಾಧನೆ ಕನ್ನಡ - ವಾಙ್ಮಯದಲ್ಲಿ ಹಚ್ಚ ಹಸಿರಾಗಿ ಉಳಿಯ ಬಲ್ಲದು. ಹೊರನಾಡಿನಲ್ಲಿದ್ದುಕೊಂಡು ಕನ್ನಡಕ್ಕಾಗಿ ಪ್ರೀತಿಯಿಂದ ದುಡಿಯುತ್ತಿರುವ ಡಾ. ಜೀವಿ ಕುಲಕರ್ಣಿ ಅವರ ದಾರಿ ಅನುಕರಣೀಯ. ಅವರೊಂದಿಗೆ ನಡೆಸಿದ ಸಾಹಿತ್ಯ - ಸಂವಾದವನ್ನು ಇಲ್ಲಿ ಲೇಖನ ರೂಪದಲ್ಲಿ ಕೊಡಲಾಗಿದೆ.

ಪ್ರ. : ನಿಮಗೆ ಕಾವ್ಯದಲ್ಲಿ ಆಸಕ್ತಿ ಮೂಡಿದ್ದು ಹೇಗೆ? ಮನೆಯ ವಾತಾವರಣ ಹೇಗಿತ್ತು?

ಉ. : ನನ್ನ ಕಕ್ಕ ಸ್ವಾಮಿರಾವ ಕವಿಯಾಗಿದ್ದರು. ನಾನು ಅವರ ಆರೈಕೆಯಲ್ಲಿ ಕೆಲ ವರುಷ ಇದ್ದೆ. ಅವರು ಆದರ್ಶವಾದಿಗಳಾಗಿದ್ದರು. ಕನ್ನಡ ಎಂ.ಎ. ಆಗಿದ್ದರೂ ಕೆ.ಇ. ಬೋರ್ಡ್ಸ್ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು. ೧೯೪೨ರ ಚಳವಳಿಯಲ್ಲಿ ಭಾಗವಹಿಸಿದ್ದರು., ಕಾರವಾರ್ ಜೈಲಿನಲ್ಲಿ ಆರು ತಿಂಗಳು ಶಿಕ್ಷೆ ಅನುಭವಿಸಿ ಬಂದಿದ್ದರು. ಅವರು ಬಾಲಕರಿಗಾಗಿ ಕವಿತೆ ಬರೆದಿದ್ದರು. ಕೆಲವು ಲಾವಣಿಪದ ರಚಿಸಿದ್ದರು. ಅವರ ಮನೆಯಲ್ಲಿ ಇದ್ದು ಪ್ರಾಥಮಿಕ ಎರಡು, ಮೂರು ಮತ್ತು ನಾಲ್ಕನೆಯ ಕ್ಲಾಸು ಓದಿದೆ. ನಂತರ ನಾನು ಹುಬ್ಬಳ್ಳಿಯ ನ್ಯೂ ಇಂಗ್ಲಿಷ ಹೈಸ್ಕೂಲ್ ಸೇರಿದಾಗ ನನಗೆ ಕ್ಲಾಸ್ ಟೀಚರ್ ಆಗಿ ಪ್ರಹ್ಲಾದ ನರೇಗಲ್ ಮಾಸ್ತರರು ದೊರೆತರು. ಅವರು ‘ಗೆಳೆಯರ ಗುಂಪಿನ’ ಸದಸ್ಯರಾಗಿದ್ದರು, ವರಕವಿ ಬೇಂದ್ರೆಯವರ ಶಿಷ್ಯರಾಗಿದ್ದರು, ರವೀಂದ್ರನಾಥ ಟಾಗೋರರ ಶಾಂತಿನಿಕೇತನದಲ್ಲಿ ಅಭ್ಯಾಸ ಮಾಡಿದ್ದರು. ನಮ್ಮ ಕ್ಲಾಸಿನಲಿ ಬೇಂದ್ರೆ ಹಾಗೂ ಗುರುದೇವ ಟಾಗೋರರ ಕಾವ್ಯವಾಚನ ಮಾಡುತ್ತಿದ್ದರು. ಅವರಿಂದ ಸ್ಫೂರ್ತಿ ಪಡೆದು ಮೊದಲ ಕವಿತೆ ಬರೆದೆ. ಅದನ್ನು ಕವಿ ಬೇಂದ್ರೆಯವರ ಉಪಸ್ಥಿತಿಯಲ್ಲಿ ವಾಚಿಸುವ ಭಾಗ್ಯ



ದೊರೆಯಿತು. ನಾನಾಗ ೨ನೆಯ (ಈಗಿನ ೭ನೆಯ ಕ್ಲಾಸಿನಲ್ಲಿದ್ದೆ.)

ಪ್ರ. : ಬಾಲ್ಯದಲ್ಲಿ ನೀವು ಯಾರ ಯಾರ ಪ್ರೇರಣೆ ಪ್ರಭಾವಗಳಿಗೆ ಒಳಗಾದಿರಿ?

ಉ. : ಬಾಲ್ಯದಲ್ಲಿ ನನ್ನ ಮೇಲೆ ಅನೇಕರ ಪ್ರಭಾವವಾಯಿತು. ಮೊದಲನೆಯದಾಗಿ ನನ್ನ ಅಜ್ಜನ ಪ್ರಭಾವ ನನ್ನ ಮೇಲೆ ಆಯಿತು. ನನ್ನ ಅಜ್ಜ ರಾಮಚಂದ್ರರಾವ (ಬಾಬಾ ಸಾಹೇಬ ವಿಜಾಪುರಕರ್) ಒಳ್ಳೆಯ ಕೀರ್ತನಕಾರರಾಗಿದ್ದರು. ನಿಂಬಾಳದ ಗುರುದೇವ ರಾನಡೆಯವರ ಗುರುಬಂಧುಗಳೂ, ಇಂಚಗೇರಿ ಭಾವೂಸಾಹೇಬ ಮಹಾರಾಜರ ಶಿಷ್ಯರೂ ಆಗಿದ್ದರು. ಕನ್ನಡ - ಮರಾಠಿ ಭಾಷೆಗಳಲ್ಲಿ ಕೀರ್ತನ (ಹರಿಕಥೆ) ಮಾಡುತ್ತಿದ್ದರು. ಅಸಂಖ್ಯ ದಾಸರ ಪದಗಳ ಹಾಗೂ ಸಂತರ ಅಭಂಗಗಳು ಅವರಿಗೆ ಮುಖೋದ್ಗತವಾಗಿದ್ದವು. ಎಳೆಮೆಯಲ್ಲಿ ನಾನು ತಾಯಿಯನ್ನು ಕಳೆದುಕೊಂಡದ್ದರಿಂದ ಅಜ್ಜನ ಆರೈಕೆಯಲ್ಲೇ ಬೆಳೆದ, ಅವರಿಗೆ ಜ್ಯೋತಿಷ್ಯದಲ್ಲೂ ಗತಿ ಇತ್ತು. ಅವರ ಪ್ರಭಾವ ನನ್ನ ಮೇಲೆ ಗಾಢವಾಗಿ ಆಯಿತು. ನನ್ನ ಕಕ್ಕ ಮುಂಬೈ ಆಕಾಶವಾಣಿ ಸೇರಿದರು. ಅವರ ಅನೇಕ ಹಾಡುಗಳನ್ನು ಎಚ್.ಎಂ.ವಿ. ಕಂಪನಿಯವರು ರೆಕಾರ್ಡ ಮಾಡಿದ್ದರು. ಮುಂಬೈ ನಗರಿಯ ಬಗ್ಗೆ ಅವರಿಂದ ಕೇಳಿದ್ದೆ. ನಾನೂ ಕವಿಯಾಗಬೇಕು, ಮುಂಬೈಯಲ್ಲಿ ವಾಸಿಸಬೇಕು ಎಂಬ ಸ್ವಪ್ನ ಬಾಲ್ಯದಿಂದ ಕಾಣುತ್ತಿದ್ದೆ. ಗದುಗಿನ ಸಮಿತಿ ಶಾಲೆಯಲ್ಲಿ ೭ನೆಯ ತರಗತಿಯಿಂದ ಎಸ್. ಎಸ್. ಸಿ. ವರೆಗೆ ವಿದ್ಯಾಭ್ಯಾಸ ಮಾಡಿದೆ, ಕಾರಣ ನನ್ನ ತಂದೆಯವರಿಗೆ ಅಲ್ಲಿಗೆ ವರ್ಗವಾಗಿತ್ತು. ಅಂಚೆ ಖಾತೆಯಲ್ಲಿ ಅವರಿಗೆ ಕೆಲಸವಿತ್ತು. ಸಮಿತಿ ಶಾಲೆಯಲ್ಲಿ ನನ್ನ ಕ್ಲಾಸ್‌ಮೇಟ್ ಹಾಗೂ ರೂಮ್‌ಮೇಟ್ ಆಗಿದ್ದ ಗಣೇಶ ಗ್ರಾಮ ಪುರೋಹಿತನಿಗೆ ಓದುವ ಹವ್ಯಾಸವಿತ್ತು. ನಮಗೆ ಎಚ್.ಬಿ.ಇನಾಂದಾರ್, ಕೀರ್ತಿನಾಥ ಕುರ್ತಕೋಟಿಯಂತಹ ಶಿಕ್ಷಕರು ದೊರೆತರು. ಅವರು ಕುಮಾರವ್ಯಾಸ ಹಾಗೂ ಬೇಂದ್ರೆಯವರ ಕಾವ್ಯದಲ್ಲಿ ನಮ್ಮ ಆಸಕ್ತಿಯನ್ನು ಕುದುರಿಸಿದರು. ಸಮಿತಿ ಶಾಲೆಯಲ್ಲಿ ಪ್ರತಿ ಶುಕ್ರವಾರ ಪಠ್ಯೇತರ ಚಟುವಟಿಕೆಗಳಿಗಾಗಿ ಅರ್ಧದಿನ ಮೀಸಲಾಗಿರುತ್ತಿತ್ತು. ಪ್ರತಿ ಕ್ಲಾಸಿನ ವಿದ್ಯಾರ್ಥಿಗಳಿಂದ ಮನರಂಜನೆಯ ಕಾರ್ಯಕ್ರಮವಿರುತ್ತಿತ್ತು, ವಿದ್ಯಾರ್ಥಿಗಳಿಂದ ನಾಟಕ ಆಡಿಸುತ್ತಿದ್ದರು. ನನಗೆ ನಾಟಕದ ಮೇಲೆ ವಿಶೇಷ ಒಲವು ಉಂಟಾಗಲು ಈ ಶಾಲೆಯ ವಾತಾವರಣವೇ ಕಾರಣವಾಗಿತ್ತು.

ಪ್ರ. : ನಿಮಗೆ ಹೆಚ್ಚು ಖುಶಿಕೊಟ್ಟ ಅಭಿವ್ಯಕ್ತಿ ಮಾಧ್ಯಮ ಯಾವುದು? (ಕಾವ್ಯ/ಅಂಕಣ/ನಾಟಕ), ಯಾಕೆ?

ಉ. : ನನಗೆ ಹೆಚ್ಚು ಖುಶಿಕೊಟ್ಟ ಸಾಹಿತ್ಯ ಮಾಧ್ಯಮ ಕಾವ್ಯ ಎಂದು ಹೇಳಬಹುದು. ಅದರ ಬಗ್ಗೆ ಸ್ವಲ್ಪದರಲ್ಲಿ ಹೇಳುವದು ಕಷ್ಟಕರ. ಕವಿತೆ ನನಗೆ ಸಹಜವಾಗಿ ಒಲಿದು ಬಂತು. ನಾನು ಏಕಾಕಿಯಾಗಿರುವಾಗ, ದುಃಖದ ಸನ್ನಿವೇಶ ಎದುರಿಸುತ್ತಿರುವಾಗ, ಕವಿತೆ. ತಂತಾನೇ ಬಂದುಬಿಡುತ್ತಿತ್ತು. ನನ್ನ ಬಾಲ್ಯದಲ್ಲಿ ‘ಶೋಕ’ದಿಂದ ‘ಶ್ಲೋಕ’ ಹೊರಬರಲು ಶುರುವಾಯಿತು. ನಂತರ ಇದೇ ರೂಢಿ ಯಾಯಿತು. ನನಗೆ ನೋವಾದಾಗ ಕವನ ನಲಿವು ತರುತ್ತಿತ್ತು. ಬೇಂದ್ರೆಯವರ ಸಾನ್ನಿಧ್ಯ ನನಗೆ ಕಾಲೇಜು ಜೀವನದಲ್ಲಿ ನಾಲ್ಕು ವರುಷ (೧೯೫೬-೬೦) ಧಾರವಾಡದಲ್ಲಿ ದೊರೆಯಿತು. ಎಚ್ಚರದಲ್ಲಿ ಅಷ್ಟೇ ಅಲ್ಲ, ನನ್ನ ಸ್ವಪ್ನದಲ್ಲಿ ಕೂಡ ಬೇಂದ್ರೆಯವರು ಬಂದು ನನ್ನಿಂದ ಕಾವ್ಯ ಬರೆಸಿದರು. ನನಗೆ ‘ಜೀವಿ’ ಎಂಬ ಕಾವ್ಯನಾಮ ನೀಡಿದರು. ಕನ್ನಡದಲ್ಲಿ ‘ಆರತಿ’ಬರೆಸಿದರು. ಗೋಕಾಕರು ನನ್ನ ಕವಿತೆಯ ವಿಮರ್ಶೆ ಮಾಡಿದರು. ಉತ್ತಮವಾಗಲು ತಿದ್ದಿದರು. ನನ್ನ ಪ್ರಥಮ ಕಾವ್ಯ ಸಂಗ್ರಹ ‘ಮಧು ಸಂಚಯ’ಕ್ಕೆ ಮುನ್ನುಡಿ ಬರೆದರು. ಪ್ರಕಟಣೆಗೆ ಆರ್ಥಿಕ ಸಹಾಯ ಮಾಡಿದರು.

ಪ್ರ. : ‘ಗೆಳೆಯರ ಗುಂಪಿ’ನೊಂದಿಗೆ ನಿಮ್ಮ ಸಂಬಂಧ ಹೇಗಿತ್ತು?

ಉ. : 'ಗೆಳೆಯ ಗುಂಪಿ'ನ ಹೆಚ್ಚಿನ ಸದಸ್ಯರೆಲ್ಲ ನಮ್ಮ ಗುರುಸ್ಥಾನದಲ್ಲಿದ್ದರು. ಗುಂಪಿನ ತ್ರಿಮೂರ್ತಿಗಳಾದ ಬೇಂದ್ರೆ-ವಿನಾಯಕ - ಮಧುರಚೆನ್ನ ಇವರಲ್ಲಿ ಇಬ್ಬರ ಗಾಢವಾದ ಸ್ನೇಹವನ್ನು ಪಡೆದಿದ್ದೆ. ಮಧುರಚೆನ್ನರನ್ನು ನೋಡಿರಲಿಲ್ಲ. ಆದರೆ ಅವರ ಬಗ್ಗೆ ಸಾಕಷ್ಟು ಕೇಳಿದ್ದೆ. ನನ್ನ ಮೇಲೆ ಪ್ರಭಾವ ಬೀರಿದ ಮಿತ್ರ ಆರ್. ಜಿ. ಕುಲಕರ್ಣಿಯವರು ಅವರ ಬಗ್ಗೆ ಒಂದು ಪುಸ್ತಕ ಬರೆದಿದ್ದರು. ಪಾಂಡಿಚೇರಿಗೆ ಹೋಗಿ ಅವರನ್ನು ಕಂಡು ಬಂದಿದ್ದರು. ಬಳಗದ ಪ್ರಹ್ಲಾದ ನರೇಗಲ್ ನನ್ನ ಶಿಕ್ಷಕರಾಗಿದ್ದರು. ಬೆಟಗೇರಿ ಕೃಷ್ಣಶರ್ಮ ಹತ್ತಿರದವರಾಗಿದ್ದರು. ರಂ. ಶ್ರೀ. ಮುಗುಳಿಯವರ ಒಡನಾಟವಿತ್ತು. ಜಿ.ಬಿ.ಜೋಶಿ, ಶಂ.ಬಾ. ಜೋಶಿ ನನಗೆ ಕೇವಲರಾಗಿದ್ದರು. ಗೆಳೆಯರ ಗುಂಪಿನ ಮಾದರಿಯ ಒಂದು ಗೆಳೆಯರ ಬಳಗ.

ಪ್ರ. : ಬೇಂದ್ರೆ ಗೋಕಾಕರು ನಿಮ್ಮ ಮೇಲೆ ಬೀರಿದ ಪ್ರಭಾವ ಯಾವ ತೆರನಾದುದು?

ಉ. : ನಾನು ನನ್ನ ಗುರುದ್ವಯರ ಮೇಲೆ ಗ್ರಂಥಗಳನ್ನೇ ಬರೆದಿದ್ದೇನೆ. ಅವರು ನನ್ನನ್ನು ಲೇಖಕನನ್ನಾಗಿ ರೂಪಿಸಿದ ರೂವಾರಿಗಳು. ಕಲ್ಲಿನಲ್ಲಿ ಮೂರ್ತಿ ಇದ್ದೇ ಇರುತ್ತದೆ. ಆತಂಕ ಸರಿಸಿದಾಗ ಅದು ಮೂರ್ತರೂಪ ತಾಳುತ್ತದೆ. ('ಟಂಕಾ ಆತಂಕಾ ಸರಿಸಿ'- ಬೇಂದ್ರೆ) ಬೇಂದ್ರೆ ಗೋಕಾಕರು ಆ ಕೆಲಸ ಮಾಡಿದರು. ಅತ್ಯಂತ ಪ್ರೀತಿಯಿಂದ ಅವರು ನನ್ನ ವ್ಯಕ್ತಿತ್ವವನ್ನು ರೂಪಿಸಿದರು. ಗೋಕಾಕರ ಬಗ್ಗೆ ಇನ್ನೊಂದು ಪುಸ್ತಕ ನವಕರ್ನಾಟಕ ಪಬ್ಲಿಕೇಶನ್ಸ್ ದವರು ಬರೆಸಿದರು. ಬೇಂದ್ರೆಯವರ ಬಗ್ಗೆ ನಾನು ಇನ್ನೊಂದು ಗ್ರಂಥ ಬರೆದಿದ್ದೇನೆ. ಅದು ಈಗ ಅಚ್ಚಿನಲ್ಲಿದೆ.

ಪ್ರ. : ನೀವೇಕೆ ಬರೆಯುತ್ತೀರಿ?

ಉ. : ಬ್ರಹ್ಮ ಸ್ವರೂಪವೇನು? ಎಂದು ಕೇಳಿದಾಗ ಅದಕ್ಕೆ 'ನೇತಿ ನೇತಿ' ಎಂಬ ಉತ್ತರ ಬಂತು. ಹಾಗೆ ನಾನೇಕೆ ಬರೆಯುತ್ತೇನೆ ಎಂಬ ಪ್ರಶ್ನೆಗೆ 'ನಾನೇಕೆ ಬರೆಯಬಾರದು?' ಎಂಬ ಪ್ರಶ್ನೆಯನ್ನೇ ಉತ್ತರ ರೂಪದಲ್ಲಿ ಕೊಡುವೆ. ಕೋಗಿಲೆಗೆ ಹಾಡುವದು ಹೇಗೆ ಸಹಜ ಧರ್ಮವೋ ಹಾಗೆ ಕಲಾವಿದನಿಗೆ ತನಗೆ ಪ್ರಿಯವಾದ ಕಲಾ ಮಾಧ್ಯಮದಲ್ಲಿ ತನ್ನ ತೊಡಗಿಸಿಕೊಳ್ಳುವುದು ಸಹಜ ಧರ್ಮವಾಗಿದೆ. 'ಕವಿತಾ ಬರೆಯೋದು ಅಂದ್ರ ಮಕ್ಕಳನ್ನ ಹಡೆದಂತೆ. ಪ್ರಸವವೇದನೆ ಆದಮೇಲೆ ಹೆರಿಗೆ. ಅಂತ ಬೇಂದ್ರೆಯವರು ಹೇಳುತ್ತಿದ್ದರು. ಭಾವ ಮತ್ತು ಶಬ್ದದ ಸಂಧಿಯಲ್ಲಿ ಸದ್ಭಾವದ ಹೆರಿಗೆ ಆಗುತ್ತದೆ. ಎಂದು ಹೆರಿಗೆ' ಪದ್ಯದಲ್ಲಿ ಬರೆಯುತ್ತಾರೆ. ತಪಸ್ ಇಲ್ಲದೆ ಸಿದ್ಧಿಯಿಲ್ಲ, ಬೇನೆಯಿಲ್ಲದೆ ನವ ಸೃಷ್ಟಿಯಿಲ್ಲ.

ಪ್ರ. : ಯೋಗ/ಪ್ರಕೃತಿ ಚಿಕಿತ್ಸೆಯ ಕಡೆಗೆ ನೀವು ಹೇಗೆ ಆಕರ್ಷಿತರಾದಿರಿ?

ಉ. : ಪ್ರಶ್ನೆ ಚಿಕ್ಕದು ಆದರೆ ಉತ್ತರ ದೀರ್ಘವಾಗಿದೆ. ಸ್ವಲ್ಪದರಲ್ಲಿ ಹೇಳಲು ಪ್ರಯತ್ನಿಸುವೆ. ಯೋಗಾಭ್ಯಾಸದಲ್ಲಿ ನನಗೆ ಬಾಲ್ಯದಿಂದಲೂ ಆಸಕ್ತಿ ಇತ್ತು. ಆದರೆ ಕೆಲಕಾಲ ಅದನ್ನು ಮರೆತುದರಿಂದ ದೇಹ ಸ್ಥೂಲವಾಗಿತ್ತು, ಜಡವಾಗಿತ್ತು. ವಿಶ್ವವಿಖ್ಯಾತ ಯೋಗಾಚಾರ್ಯ ಅಯ್ಯಂಗಾರರ ಸಂಪರ್ಕ ಬಂದಮೇಲೆ ಮತ್ತೆ ಆಸಕ್ತಿ ವಹಿಸಿದೆ. ಮತ್ತೆ ಸಂಪರ್ಕ ತಪ್ಪಿತು. ಅಂಬಿಕಾ ಯೋಗ ಕುಟೀರದ ಹಟಯೋಗಿ ನಿಕಂ ಗುರೂಜಿಯವರ ಸಂಪರ್ಕ ಬಂದಾಗಿನಿಂದ, ಸಂಧಿವಾತದಿಂದ ನನ್ನನ್ನು ಅವರು ಮುಕ್ತಗೊಳಿಸಿದಾಗಿನಿಂದ, ಕಾವ್ಯದಷ್ಟೇ ಯೋಗ ನನಗೆ ಪ್ರಿಯವಾಯಿತು. ಯೋಗದ ಪ್ರಚಾರಕಾರ್ಯದಲ್ಲಿ ಒಂದು ಬಗೆಯ missionary zeal ನಿಂದ ನನ್ನನ್ನು ನಾನೇ ತೊಡಗಿಸಿಕೊಂಡೆ. ಒಂದು ರೀತಿಯಿಂದ ನನ್ನ ಅರ್ಧಾಂಗಿಯಿಂದ ಹೆಚ್ಚಿನ ಪ್ರೇರಣೆ ಪಡೆದೆ. ನನ್ನ ವಿದ್ಯಾರ್ಥಿ ವರಿಷ್ಠನ್ಯಾಯಾಲಯದ ಹಿರಿಯ ನ್ಯಾಯವಾದಿಗೆ (ವಸಂತ ಕಿಣಿ) ಯೋಗಾಭ್ಯಾಸ ಕಲಿಸಲು ತೊಡಗಿದಾಗ 'ಯೋಗಶಿಬಿರ'ದ ಕಲ್ಪನೆ ರೂಪಗೊಂಡಿತು. ಹುಬ್ಬಳ್ಳಿಯ ಕೆ.ಎಲ್.ಇ.ಸೊಸೈಟಿಯ ಬಿ.ಎಡ್. ಕಾಲೇಜಿನ ವಿದ್ಯಾರ್ಥಿಗಳ ಆಸಕ್ತಿ ಯಿಂದಾಗಿ, ಹುಬ್ಬಳ್ಳಿಯ ಪ್ರಮುಖ ಡಾಕ್ಟರರ (ಡಾ. ಎಂ.ಎಂ.ಜೋಶಿ ಮಿತ್ರ - ಬಳಗ) ಆಸಕ್ತಿಯಿಂದಾಗಿ ಅದಕ್ಕೊಂದು ರೂಪ ಬಂತು. ನಾನು ಅಮೇರಿಕೆಗೆ ವಿಶ್ವಕನ್ನಡ ಸಮ್ಮೇಳನಕ್ಕೆ ಆಮಂತ್ರಿತನಾದಾಗ, ನಾಲ್ಕು ತಿಂಗಳು ಪ್ರವಾಸ ಕೈಕೊಂಡಾಗ, ನನ್ನ ಸಾಹಿತ್ಯಿಕ ಚಟುವಟಿಕೆಗಿಂತ ನನ್ನ 'ಯೋಗಶಿಬಿರ'ಗಳೇ ಹೆಚ್ಚು ಅರ್ಥಪೂರ್ಣತೆ ಪಡೆದವು. ಪ್ರಸಿದ್ಧಿ ತಂದವು. ಡಲ್ಲಾಸ್, ಮಿನಿಯಾಪೊಲಿಸ್, ಶಿಕ್ಯಾಗೊ, ವಾಶಿಂಗ್ಟನ್, ಕೆನಡಾ, ಕ್ಯಾಲಿಫೋರ್ನಿಯಾ, ಹ್ಯೂಸ್ಟನ್‌ಗಳಲ್ಲಿ ಯೋಗಶಿಬಿರ ನಡೆಸುವ ಅವಕಾಶ ದೊರಕಿತು.

ಪ್ರ. : ಮುಂಬಯಿಯಲ್ಲಿ ನಿಮ್ಮ ಮೊದಲ ದಿನಗಳು ಹೇಗಿದ್ದವು. ಮುಂಬೈ ನಿಮ್ಮ ಸಾಹಿತ್ಯ ಚಟುವಟಿಕೆಗೆ ಪೂರಕವಾಯಿತೆ?

ಉ. : ಮುಂಬೈಗೆ ನಾನು ಕೇವಲ ನೌಕರಿಗಾಗಿ ಬಂದೆ. ಇಲ್ಲಿ ಬಂದ ಮೇಲೆ ಕನ್ನಡ ಸಾಹಿತ್ಯದಲ್ಲಿ ಹೆಸರು ಮಾಡಿದ ದಿನಕರ ದೇಸಾಯಿ, ಕೃಷ್ಣಕುಮಾರ ಕಲ್ಲೂರ, ವ್ಯಾಸರಾಯ ಬಲ್ಲಾಳ ಮುಂತಾದವರ ಪರಿಚಯವಾಯಿತು. ಇಲ್ಲಿದ್ದೂ ನಾವು ಕನ್ನಡ ಸಾಹಿತ್ಯ ರಚನೆ ಜನಪ್ರಿಯ ಕವನ ಸಂಕಲನ 'ಹುಚ್ಚು-ಮುಚ್ಚಿ'ಯ ಹೆಚ್ಚಿನ ಕವಿತೆಗಳನ್ನು ನಾನು ಮುಂಬೈಗೆ ಬಂದ ಮೇಲೆ ಬರೆದೆ. ಧಾರವಾಡ ಬಿಟ್ಟು ಬರುವಾಗ ನಾನು 'ಸಂಯುಕ್ತ ಕರ್ನಾಟಕ' ದಿನಪತ್ರಿಕೆಯ ಧಾರವಾಡ ವರದಿಗಾರನಾಗಿದ್ದೆ. ಮುಂಬೈಗೆ ಬಂದ ಮೇಲೆ ೨೦ ವರುಷ ಕಾಲ ನಾನು ಮುಂಬೈ ವಾರ್ತಾಪತ್ರ ಬರೆದೆ. ನನ್ನ ಸಾಹಿತ್ಯಕ ಬರವಣಿಗೆಗೆ ಮುಂಬೈ ಅನುಕೂಲ ವಾತಾವರಣ ನೀಡಿತು. ನನಗೆ ವಿಶೇಷ ಪ್ರೋತ್ಸಾಹನೆ ನೀಡಿದವರು ಗುರುವರ್ಯರಾದ ಪಂಡಿತ ಮಾಹುಲಿ ಗೋಪಾಲಾಚಾರ್ಯರು ಹಾಗೂ ಆತ್ಮೀಯರಾದ ಡಾ. ಚಿದಂಬರ ಕುಲಕರ್ಣಿಯವರು. ನನ್ನ ಗುರುಗಳಾದ ಬೇಂದ್ರೆ - ಗೋಕಾಕರು ಮುಂಬೈಗೆ ಬಂದಾಗ ತಮ್ಮ ಸಹವಾಸದ ಲಾಭ ನೀಡುತ್ತಿದ್ದರು. ನಾನು ಕರ್ನಾಟಕದ ಹೊರಗಿರುವೆನಲ್ಲಾ ಎಂದು ಪೇಚಾಡಿದಾಗ, 'ಎಲ್ಲಿರುವಿ ಮುಖ್ಯವಲ್ಲ, ಏನು ಮಾಡುತ್ತೀ ಮುಖ್ಯ. ನಾವು ಕೂಡ ಕರ್ನಾಟಕದ ಹೊರಗೇ ಇದ್ದು ಕನ್ನಡ ನುಡಿಯ ಸೇವೆ ಮಾಡಿದೆವಲ್ಲ' ಎಂದು ಹೇಳಿ ನನಗೆ ಸಮಾಧಾನ ಹೇಳುತ್ತಿದ್ದರು. 'ಅರಂಕುಸಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿದೇಶಮಂ' ಎಂದ ಮಹಾಕವಿ ಪಂಪ. ನಾವು ಎಲ್ಲಿಯೇ ಇದ್ದರೂ ಧಾರವಾಡವನ್ನು ಮರೆಯಲಿಕ್ಕಾಗುವದಿಲ್ಲ. ಧಾರವಾಡದ ಮಣ್ಣಿನಲ್ಲಿ ಆ ಗುಣವಿದೆ. ಮರಾಠಿಯ ಶ್ರೇಷ್ಠ ಕತೆಗಾರ, ನನ್ನ ಇಂಗ್ಲಿಷ್ ಪ್ರೊಫೆಸರ್ ಆದ ಜಿ. ಎ. ಕುಲಕರ್ಣಿ ಹೇಳುತ್ತಿದ್ದರು. ''ನಾನು ಯಾವುದೇ ಊರಲ್ಲಿ ಮನೆ ಕೊಳ್ಳಲಿಲ್ಲ, ನನಗೆ ಎಲ್ಲಿಯೂ ಬೇರು ಬಿಡುವ ಮನಸ್ಸಿಲ್ಲ'' ಎಂದು. ನಾವು ಒಂದರ್ಥದಿಂದ ಮುಂಬೈಯಲ್ಲೇ ಬೇರು ಬಿಟ್ಟಿದ್ದರೂ ಧಾರವಾಡದ ತಾಯಿಬೇರು ನಮ್ಮನ್ನು ಸದಾ ಎಳೆಯುತ್ತಿದೆ. 'ಬಾರೋ ಸಾಧನಕೇರಿಗೆ' ಎಂದು ಕರೆಯುತ್ತಿದೆ.

ಪ್ರ. : ಇಂದಿನ ಸಾಹಿತ್ಯಿಕ ವಾತಾವರಣದ ಬಗ್ಗೆ ನೀವೇನಂತೀರಿ?

ಉ. : ನಾನು ಯಾವ ಗುಂಪಿಗೂ, ಪಂಗಡಕ್ಕೂ ಸೇರಿಲ್ಲ, ಸಾಹಿತ್ಯಿಕ ರಾಜಕಾರಣದಿಂದ ದೂರ ಇರುವೆ. ಒಳ್ಳೆಯ, ಆರೋಗ್ಯಕರ ಸಾಹಿತ್ಯ ಬರೆಯುವವರೆಲ್ಲ ನನ್ನ ಮಿತ್ರರು. ಈ ವಿಷಯದಲ್ಲಿ ನಾನು ಯಾವುದೇ ಹೇಳಿಕೆ ಕೊಡುವದಿಲ್ಲ. ಕನ್ನಡ ವಾಚಕರಿಂದ ನನಗೆ ಅಪಾರ ಪ್ರೀತಿ ದೊರೆತಿದೆ. ನಾನು ಅವರಿಗೆ ಕೃತಜ್ಞ. ಡಾ. ರಾಧಾಕೃಷ್ಣನ್ ಒಮ್ಮೆ ರೇಡಿಯೋ ಭಾಷಣದಲ್ಲಿ ಹೇಳಿದ್ದರು ''If we can't change events we should change our attitudes towards then'' 'ನಾವು ಪರಿಸ್ಥಿತಿಯನ್ನು ಬದಲು ಮಾಡಲು ಶಕ್ತರಾಗದಿದ್ದರೆ, ನಾವು ಅವುಗಳ ಬಗೆಗೆ ಇರುವ ನಮ್ಮ ದೃಷ್ಟಿಯನ್ನು ಬದಲಿಸಬೇಕು' ಎಂದು. ಸಾಹಿತ್ಯಿಕ ವಾತಾವರಣವನ್ನು ನಾವು ಬದಲು ಮಾಡಲು ಸಾಧ್ಯವಾಗದಿದ್ದರೆ, ನಾವು ನಮ್ಮ ದೃಷ್ಟಿಕೋನವನ್ನು ಬದಲಿಸಬೇಕು. ಕೊನೆಗೆ ಸತ್ಯಕ್ಕೆ, ಋಜುತ್ವಕ್ಕೆ ಜಯವಿದೆ.

ಪ್ರ. : ಈಗೇನು ಬರೆಯುತ್ತಿದ್ದೀರಿ?

ಉ.: ನಾನು ಏನು ಬರೆಯುತ್ತಿದ್ದೇನೆ ಎನ್ನುವದನ್ನು ಹೇಳುವದಕ್ಕಿಂತ ಪ್ರಕಟನೆಗೆ ಯಾವ ಪುಸ್ತಕಗಳು ಸಿದ್ಧವಾಗಿವೆ ಎನ್ನುವದನ್ನು ಹೇಳುವುದು ವಿಹಿತವೆಂದು ತೋರುತ್ತದೆ. 'ಈ ಸಂಜೆ' ಎಂಬ ಪತ್ರಿಕೆಗಾಗಿ ೫೨ ವಾರ ಬರೆದ 'ವಚನ'ಗಳ ಸಂಗ್ರಹ ಪ್ರಕಟನೆಗೆ ಸಿದ್ಧವಾಗಿದೆ. ಈ ರೀತಿಯ ಬರವಣಿಗೆಗೆ ಮಾರುಕಟ್ಟೆ ಇಲ್ಲ, ನನಗೆ ಪ್ರಿಯವಾದ ಗದ್ಯ - ಪದ್ಯ ಇಲ್ಲಿ ಹೊಸ ರೀತಿಯಲ್ಲಿ

ಅಭಿವ್ಯಕ್ತಿ ಪಡೆದಿದೆ. ಕಳೆದ ಹತ್ತಾರು ವರುಷಗಳಲ್ಲಿ ಬರೆದ ಕವನಗಳು ಪುಸ್ತಕ ರೂಪದಲ್ಲಿ ಬರಬೇಕಾಗಿದೆ. ನನ್ನ ಜನಪ್ರಿಯ ಕಾವ್ಯ ಸಂಕಲನ 'ಹುಚ್ಚ - ಹುಚ್ಚಿ'ಯ ದ್ವಿತೀಯ ಮುದ್ರಣ (೧೯೭೮)ದ ಪ್ರತಿಗಳು ಬಹಳ ವರ್ಷಗಳು ಕಳೆದವು. ತೃತೀಯ ಮುದ್ರಣ ಆಗಬೇಕಾಗಿದೆ. ಏಕಾಂಕ ನಾಟಕಗಳ ಸಂಪುಟ ಬರಬೇಕಾಗಿದೆ. ಬೇಂದ್ರೆಯವರ ಬಗ್ಗೆ ಬರೆದ ಇನ್ನೊಂದು ಗ್ರಂಥ ಅಚ್ಚಿನಲ್ಲಿದೆ. ಇನ್ನು ಬರೆಯಬೇಕಾದ ಹಲವಾರು ಪುಸ್ತಕ ರೂಪರೇಷೆ ಸಿದ್ಧವಾಗಿ. ಯೋಗ ಹಾಗೂ ನಿಸರ್ಗ ಚಿಕಿತ್ಸೆಯ ಬಗ್ಗೆ ಹಲವಾರು ಕೃತಿಗಳನ್ನು ರಚಿಸಬೇಕಾಗಿದೆ. ಈಗ ಸದ್ಯ ಬರೆಯುತ್ತಲಿರುವ ಅಂಕಣ ಲೇಖನ ಅಮೇರಿಕಾ ಪ್ರವಾಸ ಅನುಭವಗಳನ್ನು ಕುರಿತಾಗಿದೆ. ೩೮ ಲೇಖನಗಳು ಪ್ರಕಟವಾಗಿವೆ. ಇನ್ನು ಎರಡು ಮೂರು ತಿಂಗಳಲ್ಲಿ ಅದು ಮುಕ್ತಾಯಗೊಳ್ಳಲಿದೆ. ನಂತರ ಪರಿಷ್ಕೃತಗೊಂಡ ಪುಸ್ತಕ ರೂಪದಲ್ಲಿ ಬರಲಿದೆ.

ಪ್ರ. : ವಿಮರ್ಶೆ ನಿಮ್ಮ ಸಾಹಿತ್ಯಕ್ಕೆ ನ್ಯಾಯ ಒದಗಿಸಿದೆಯೇ?

ಉ. : ನನ್ನ ಪುಸ್ತಕಗಳಿಗೆ ಮೊದಲಿನಿಂದಲೂ ಉತ್ತಮ ವಿಮರ್ಶೆಗಳೇ ಬಂದಿವೆ. ನನ್ನ ಪ್ರಾರಂಭದ ಕವಿತಾ (ಮಧುಸಂಚಯ) ಕಥಾ, (ಧೃತರಾಷ್ಟ್ರ ಸಂತಾನ) ಹಾಗೂ ನಾಟಕ (ಪ್ರಜಾಪ್ರಭುತ್ವ) ಸಂಕಲನಗಳ ಬಗ್ಗೆ ಎಲ್ಲೆಡೆ ಉತ್ತಮ ವಿಮರ್ಶೆಗಳು ಬಂದವು. ಸಿ.ಹೆಚ್. ಪ್ರಹ್ಲಾದರಾವ್ ಅವರು ಇಂಗ್ಲಿಷ್ ಪತ್ರಿಕೆಯಲ್ಲಿ ಮೂರು ಲೇಖನಗಳನ್ನೇ ಬರೆದರು. ನನ್ನ 'ಹುಚ್ಚ - ಹುಚ್ಚಿ' ಕವನ ಸಂಕಲನವನ್ನು ಕುರಿತು 'ಟೈಮ್ಸ್ ಆಫ್ ಇಂಡಿಯಾ'ದಲ್ಲಿ ದೊಡ್ಡ ವಿಮರ್ಶೆಯನ್ನು ಎಂ.ವಿ. ಕಾಮತ್ ಬರೆದಿದ್ದರು. ಭಾಸ್ಕರ್ ಅವರು 'ಇಲಸ್ಟ್ರೇಟೆಡ್ ವೀಕ್ಲಿ'ಯಲ್ಲಿ ವಿಮರ್ಶಿಸಿದ್ದರು. ಆ ಪುಸ್ತಕಕ್ಕೆ ಕೃಷ್ಣ ಪೋದ್ದಾರ ಕಲಾತ್ಮಕ ಹೊದಿಕೆಯಿತ್ತು. ವಿದ್ಯಾವರ್ಧಕ ಸಂಘದಲ್ಲಿ ವರಕವಿ ಬೇಂದ್ರೆ ಬಿಡುಗಡೆ ಮಾಡಿದ್ದರೆ ಡಾ. ಕೆ. ಕೃಷ್ಣಮೂರ್ತಿ, ರಾ.ಯ. ಧಾರವಾಡಕರ್, ಚೆನ್ನವೀರ ಕಣವಿ ಹಾಗೂ ಸದಾಶಿವ ಒಡೆಯರ ಪುಸ್ತಕದ ಬಗ್ಗೆ ಮಾತಾಡಿದ್ದರು. ನನ್ನ ಇತ್ತೀಚಿನ ಕೃತಿಗಳಾದ 'ನಾ ಕಂಡ ಬೇಂದ್ರೆ' ಹಾಗೂ 'ನಾ ಕಂಡ ಗೋಕಾಕ' ಬಹಳ ಉತ್ತಮ ವಿಮರ್ಶೆಗಳು ಬಂದವು. ಹಿಂದೂ ಪತ್ರಿಕೆಯಲ್ಲಿ ಸುದೀರ್ಘ ವಿಮರ್ಶೆ ಬಂತು. ಡಾ. ಹಾ. ಮಾ. ನಾಯಕರು ಗೋಕಾಕ ಪುಸ್ತಕದ ಬಗ್ಗೆ 'ಸುಧಾ'ದಲ್ಲಿ ಎರಡು ಪುಟಗಳ ಲೇಖನ ಬರೆದು ಲೇಖನದುದ್ದಕ್ಕೂ ಮೆಚ್ಚುಗೆಯ ಪುಷ್ಪವೃಷ್ಟಿ ಮಾಡಿ ಕೊನೆಗೆ, ಈ ಪುಸ್ತಕ ಬರೆದ ಜೀವಿಯವರು ಧನ್ಯರು, ಬರೆಸಿಕೊಂಡ ವಿನಾಯಕರೂ ಧನ್ಯರು !' ಎಂಬ ಉದ್ಗಾರ ತೆಗೆದಿದ್ದರು.

ಪ್ರ. : ಇನ್ನೇನಾದರೂ ನಿಮಗೆ ಹೇಳುವುದಿದೆಯೇ?

ಉ. : ಒಂದೆರಡು ಮಾತು ನಾನು ಹೇಳಬೇಕು. ಇತ್ತೀಚೆಗೆ ಮಾತು ಮಾತಿಗೆ ನಾನು ಯೋಗದ ಬಗ್ಗೆ ಮಾತಾಡುತ್ತೇನೆ, ಇದರಿಂದ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ ಎಂಬ ನುಡಿ ಕೆಲವರಿಂದ ಬಂದಿದೆ. ನಾನು ನಿವೃತ್ತಿಯ ನಂತರ ಬೇಂದ್ರೆ ಹಾಗೂ ಗೋಕಾಕರ ಮೇಲೆ ಪುಸ್ತಕ ಬರೆದೆ, ಹತ್ತು ಹದಿನೈದು ವರ್ಷ ಮೊದಲೇ ಬರೆದಿದ್ದರೆ ಒಳ್ಳೇದಾಗುತ್ತಿತ್ತು ಎಂದೂ ಕೆಲವರು ನುಡಿದಿದ್ದಾರೆ. ವಿಷಯ ಸಂಗ್ರಹ ೨೦ ವರುಷ ಮೊದಲೇ ನನ್ನ ಬಳಿ ಸಿದ್ಧವಾಗಿತ್ತು. ಯೋಗಾಭ್ಯಸದಿಂದ ಒಂದು ರೀತಿಯ ಮಾನಸಿಕ ಪಕ್ವತೆ ಬಂದಿರುವುದರಿಂದ ನನಗೆ ಈಗ ಬರೆಯುವುದು ಸಾಧ್ಯವಾಯಿತು. ಮೊದಲೇ ಬರೆದಿದ್ದರೆ ಇಷ್ಟು ಉತ್ತಮವಾಗುತ್ತಿರಲಿಲ್ಲ ಎಂಬುದು ನನ್ನ ಪ್ರಾಮಾಣಿಕ ಅಭಿಪ್ರಾಯ.

ನಾನು ನಿವೃತ್ತನಾದಾಗ ನನ್ನೆದುರು ಎರಡು ನೌಕರಿಗಳು ದಾರಿ ನೋಡುತ್ತಿದ್ದವು. ಒಂದು ಮುಂಬೈಯಲ್ಲೆ ದೊಡ್ಡ ವಿದ್ಯಾ ಸಂಸ್ಥೆ ಆಡಳಿತಾಧಿಕಾರಿ ಹುದ್ದೆ ನೀಡಲು ಸಿದ್ಧವಾಗಿತ್ತು. ಕರ್ಜತದಲ್ಲಿರುವ ಒಂದು ಯೋಗ - ನಿಸರ್ಗೋಪಚಾರ ಕಾಯಕಲ್ಪ ಕೇಂದ್ರದ ಒಬ್ಬ ಟ್ರಸ್ಟೀ ನನ್ನ ವಿದ್ಯಾರ್ಥಿಯಾಗಿದ್ದರು. ಅಲ್ಲಿಯ ಕೈತುಂಬ ಸಂಬಳದ ನಿರ್ದೇಶಕ ಹುದ್ದೆ ನನಗಾಗಿ ದಾರಿ ಕಾಯುತ್ತಿತ್ತು. ನಾನು ಒಂದು ವೇಳೆ ಅವನ್ನು ಸೇರಿದ್ದರೆ ನನ್ನಿಂದ ಯಾವುದೇ ಸಾಹಿತ್ಯ ಸೇವೆಯಾಗುತ್ತಿರಲಿಲ್ಲ. ನಾನು ಅಮೇರಿಕೆಯಲ್ಲಿರುವ ನನ್ನ ಮಗನ ಸಲಹೆ ಕೇಳಿದಾಗ ಅವನು ಬರೆದಿದ್ದ, ''ನೀವು ನಿವೃತ್ತಾದ ಮೇಲೆ ನಿಮ್ಮ ಪ್ರಿಯ ಕ್ಷೇತ್ರಗಳಾದ ವಿದ್ಯಾಸಂಸ್ಥೆ ಹಾಗೂ ಯೋಗ ಸಂಸ್ಥೆಯಲ್ಲಿ ಕೆಲಸ ಮಾಡಲು ಇಚ್ಛಿಸಿದ್ದು ಸ್ತುತ್ಯ. ನೀವು ವಾರಕ್ಕೊಂದು ಸಲ ಅಲ್ಲಿ ಹೋಗಿ ಬನ್ನಿ. ಚಿಕ್ಕಾಸೂ ಪಡೆಯದೇ ಗೌರವ ಸೇವೆ ಸಲ್ಲಿಸಿರಿ. ನೀವೂ ಹಣ ಪಡೆದರೆ ಅವರು ನಿಮ್ಮ ರಕ್ತ ಹೀರುತ್ತಾರೆ. ನೀವು ನಿವೃತ್ತಿ ನಂತರದ ಅರ್ಧ ಸಂಬಳದಲ್ಲಿ ಜೀವನ ಸಾಗಿಸುವ ಕಷ್ಟ ಮನಗಂಡು ಹಣಗಳಿಸಲು ನೌಕರಿ ಮಾಡಲು ಉತ್ಸುಕರಾಗಿರುವಂತೆ ನನಗೆ ಸಂಶಯ ಬರತೊಡಗಿದೆ. ನೀವು ಕಷ್ಟಪಟ್ಟು ಇಬ್ಬರು ಮಕ್ಕಳಿಗೆ ಎಂಜಿನಿಯರಿಂಗ್ ಶಿಕ್ಷಣ ನೀಡಿದ್ದೀರಿ. ನೀವು ಭಾರತ ಪ್ರವಾಸ ಮಾಡಲಿಲ್ಲ. ಕರ್ನಾಟಕ ಕೂಡ ಸರಿಯಾಗಿ ನೋಡಿಲ್ಲ. ಈ ಪತ್ರದೊಂದಿಗೆ ಹತ್ತು ಬ್ಯಾಂಕ್ - ಚೆಕ್ ಇಟ್ಟಿದ್ದೇನೆ. ನೀವು ಬೇಕಾದ; ಬೇಕಾದಷ್ಟು ಹಣ ಬಳಸಿರಿ. ನೀವು ಕವಿತೆ ಬರೆಯಿರಿ, ಪುಸ್ತಕ ಬರೆಯಿರಿ, ಪ್ರವಾಸ ಮಾಡಿರಿ, ಯೋಗಶಿಬಿರ ನಡೆಸಿರಿ. ಹಣದ ಚಿಂತೆ ಮಾಡಬೇಡಿ. ನೌಕರಿಯ ವಿಚಾರ ಬಿಟ್ಟುಬಿಡಿ''. ಎಂದು ಉದ್ಗಾರ ತೆಗೆದರು. ಯಾವುದೇ ಒಳ್ಳೆಯ ಕಾರ್ಯ ಆಗಬೇಕಾದರೆ ಅದಕ್ಕೆ ಯೋಗ್ಯ ವಾತಾವರಣ ಬೇಕು. ಅಂಥ ವಾತಾವರಣ ನನಗೆ ದೊರೆಯಿತು. ನಾನು ಆ ದೃಷ್ಟಿಯಿಂದ ಸುದೈವಿ.

•

## ಅಸೋಸಿಯೇಷನ್ನಿನಲ್ಲಿ....

(ಪುಟ 3 ರಿಂದ)

ನಂತರ ಶ್ರೀಮತಿ ಸುಶೀಲಾ ಆಚಾರ್ಯ ಅವರಿಂದ ಭಕ್ತಿಗೀತೆ, ಶ್ರೀಮತಿ ಸುಶೀಲಾ ಆಚಾರ್ಯ ಅವರು ಸುಮಾರು 30 ವರ್ಷಗಳು ನಮ್ಮ ಗಣಪತಿಗೆ ತಮ್ಮ ಭಕ್ತಿಗೀತೆಗಳ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಈ ಶುಭ ಸಂದರ್ಭದಲ್ಲಿ ಅವರು ''ಸುಶೀಲಾ ಆಚಾರ್ಯ ಮತ್ತು ಸಂಗಡಿಗರು'' ಎಂಬುದನ್ನು ಶ್ರೀ ಚಿನ್ಮಯ ನಾದಬಿಂದು ಸಂಗಡಿಗರು ಎಂಬುದಾಗಿ ಹೊಸ ಹೆಸರನ್ನು ನಾಮಕರಣ ಮಾಡಿದರು. ಅಸೋಸಿಯೇಷನ್ನಿನ ಹಿರಿಯ ಸದಸ್ಯೆ ಶ್ರೀಮತಿ ಸೀತಮ್ಮ ರಾವ್ ಅವರು ಸುಶೀಲಾ ಆಚಾರ್ಯರು ಮತ್ತು ಹೊಸ ಹೆಸರಿನ ಬಗ್ಗೆ ನಾಲ್ಕು ಮಾತನ್ನಾಡಿದರು.

ನಂತರ ಕಾರ್ಯಕ್ರಮವು ಪ್ರಾರಂಭವಾಯಿತು. 'ಗಣಪತಿ ಸ್ತುತಿ ' ಗುರುಸ್ತುತಿ ಈಶ್ವರನ ವರ್ಣನೆ, ಕೃಷ್ಣನ ಬಾಲಲೀಲೆ... ಹೀಗೆ ಹತ್ತಾರು ಭಕ್ತಿ ಗೀತೆಗಳನ್ನು ಹಾಡಿದರು. ಭಕ್ತಿ ಗೀತೆಗಳು ಎಂಬ ಹೆಸರಿಗೆ ತಕ್ಕಂತೆ ಈ ಕಲಾವಿದರು ತಮ್ಮ ಮೃದು ಮಧುರ ಕಂಠದಿಂದ ಎಲ್ಲರನ್ನೂ ಭಕ್ತಿ ಪರವಶರನ್ನಾಗಿಸಿದರು. ಡಾ. ಮಂಜುನಾಥ್‌ರವರು ವಂದನೆಗಳನ್ನರ್ಪಿಸಿದರು. ಪ್ರತಿನಿತ್ಯವೂ ಕಲಾವಿದರಿಗೆ ಅಸೋಸಿಯಯೇಷನ್ನಿನ ಪ್ರೀತಿ ಕುರುಹಾಗಿ ಪದಾಧಿಕಾರಿಗಳು ಪುಷ್ಪಗುಚ್ಛಗಳನ್ನರ್ಪಿಸಿದರು.

ಭಕ್ತಿಗೀತೆಗಳ ನಂತರ ಗಣಪತಿಯ ಪೂಜೆ, ಪ್ರತಿಷ್ಠಾಪನೆಯ ದಿನ ಹಾಗೂ ವಿಸರ್ಜನೆಯ ದಿನವಂದು ಶ್ರೀಮತಿ ಮತ್ತು ಶ್ರೀ ರಾಘವೇಂದ್ರ ಉಪಾಧ್ಯಾಯ ಅವರು ಪೂಜೆಯನ್ನು ನಡೆಸಿಕೊಟ್ಟರು. ಮಹಿಳೆಯರು ಗೌರಮ್ಮನಿಗೆ ಸೋಬಲಕ್ಕಿ ಇಟ್ಟು ಪೂಜೆ ಮಾಡಿ ಮರದ ಬಾಗಿನವನ್ನು ಕೊಟ್ಟರು. ನೂತನ ದಂಪತಿಗಳಿಗೆ ಆಶೀರ್ವಾದವಾಯಿತು. ನಂತರ ಅಲಂಕೃತ ಟ್ರಕ್ಕಿನಲ್ಲಿ ಗಣಪತಿ ಹಾಗೂ ಗೌರಮ್ಮನನ್ನು ಮೆರವಣಿಗೆಯಲ್ಲಿ ದಾದರ್ ಸಮುದ್ರಕ್ಕೆ ಕರೆದೊಯ್ಯಲಾಯಿತು. ಭಕ್ತರೆಲ್ಲರೂ ಹಾಡುತ್ತ, ಪಾಡುತ್ತ ಜೈಕಾರಗಳನ್ನು, ಘೋಷಿಸುತ್ತಾ ಆನಂದದಿಂದ ಭಾಗವಹಿಸಿದರು. ''ಗಚ್ಛ ಗಚ್ಛ ಸುರಶ್ರೇಷ್ಠ ಪುನರಾಗಮನಾಯಚ'' ಎಂದು ಮರು ಆಹ್ವಾನವನ್ನು ಕೊಟ್ಟು ಡಾ. ಮಂಜುನಾಥರವರ ನೇತೃತ್ವದಲ್ಲಿ ಸಮುದ್ರ ದಂಡೆಯಲ್ಲಿ ಮತ್ತೆ ಪೂಜೆ ಮಂಗಳಾರತಿ ಮಾಡಿ ವಿಸರ್ಜಿಸಲಾಯಿತು. ನಂತರ ಎಲ್ಲರಿಗೂ ಭೋಜನದ ವ್ಯವಸ್ಥೆ. ಸದಸ್ಯರೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಆಡಳಿತ ವರ್ಗದವರ ಹಾಗೂ ಸದಸ್ಯರೆಲ್ಲರ ಸಹಕಾರದಿಂದ ಉತ್ಸವ ಕಾರ್ಯಕ್ರಮವು ಯಶಸ್ವಿಯಾಯಿತು.

-- ರಮಾವಸಂತ



**Telescope in Observatory**

the President of the Order, joined the order in Mysore and spent nine years there.

This is the mother institution. Swami Atmavidanandaji is its present President. The Mysore Ashrama is the Kannada publication wing of the Ramakrishna Mission. It has published over 200 Kannada titles. There is nitya pooja, prayers in the evenings and lectures and satsang on Saturday / Sunday. There is a very well equipped library. The Ashram also runs 'Viveka Shikshana' a coaching class for low scoring (below 45 %), poor children of 9th & 10th Std. in evenings. This is totally free and is open to both boys & girls.

Under the Ramakrishna Mission at Mysore we have two other institutions: Sri Ramakrishna Vidyashala (SRKVS) and Ramakrishna Institute of Moral & Spiritual Education (RIMSE). Both these were founded by Revered Swami Shambhavanandaji Maharaj who was the head of the Mysore Ashram from 1941 to 1972. He was the founder of these institutions. They stand today as a monument to his great vision. Swami Yuktatmanandaji is heading the RIMSE and I am in charge of the SRKVS.

**Nesaru :** Ramakrishna Vidyashala is quite well known. What is unique about it?

**Swami Muktidananda:** It is indeed a unique institution in the country. It is a sincere attempt to translate into reality the educational vision of Swami Vivekananda. According to Swamiji, the real aim of education is ' man-making ' and it implies taking care of all aspects of human personality - physical, mental, moral and spiritual. So, SRKVS does not deal with mere academic education. It deals with the all round development of the personality with excellence in academics and inculcation of higher values and ideals of Indian culture. The emphasis is on character building. The Indian spiritual values and the western scientific temper are optimally blended in this educational system.

All round development is promoted by activities like sports, physical training in the Gymnasium, swimming, hobbies, recreational facilities, social service, a healthy work culture, leadership training, etc. The Vidyashala is spread out on a lush 80 acre plot of land where, apart from the SRKVS and RIMSE buildings, hostel and staff quarters, 19 playgrounds & a stadium, swimming pool, astronomical observatory, gymnasium, NCC army wing, auditorium, dairy and nature class rooms are housed. Apart from these there are ornamental gardens, fruit & vegetable gardens, green house and evergreen and deciduous forest patches. The nature class rooms in the midst of these lush greenery helps the students to appreciate the nature and learn to be eco-friendly.

The School is residential and has classes commencing from the 8th standard and extends up to II PUC (Junior College). It is comparable to any of the better known residential schools of the country like the Doon school or the Rishi Valley School. The admission is through an entrance test and is generally quite tough. About a thousand students apply each year out of which, about 100 are admitted. A few seats are given to deserving students from economically weaker sections. All our students are taught computers. Typing also is compulsory so that it helps them in using the computers. Every classroom has an open shelf library. A great emphasis is given to development of leadership by making students participate in various activities. We have 17 departments, which are totally run and managed by the students. We give a lot of importance to promoting hobbies and bringing out the talents of the students. Our College Band Troop has been highly appreciated and felt to be as good as the Military Band. Participation in interclass and inter-school competitions are encouraged. The school has programme called Narayana Seva, where the students serve the poor and downtrodden and contribute their mite to help them. In the last 30 years, SRKVS has had 100 % results in SSLC & PUC in almost every year.

**Nesaru :** Could you name some of the prominent persons who have studied at RKVS?

**Swami Muktidananda:** Many. To name a few...

Shri S. M. Krishna, honorable Chief Minister of Karnataka was our hostel student.

Late N. A. Muthanna, additional Chief Secretary.

Shri Kuvempu, the celebrated Kannada writer and poet also stayed in the Mysore Ramakrishna Ashrama as a resident for more than a decade.

**Nesaru :** What about RIMSE? What are its activities?

**Swami Muktidananda:** RIMSE is located on an elevated area of the land near the Vidyashala campus. It is basically a B.Ed. college with a compulsory specialization subject entitled 'Moral and Spiritual Education'. It also conducts short-term courses in value education for teachers from central government and state government schools. It also conducts retreats, where one withdraws into a quiet place away from the humdrum of the city and rests one's

mind on the inner self. This helps in attaining greater equilibrium, understanding and reorienting one's goals. Apart from retreats conducted for their students, RIMSE also conducts a 5-day retreat for the general public, twice in a year.

**Nesaru :** What other publications or educational aids do you bring out?

**Swami Muktidananda:** Our Ashram has brought out a CD on personality development. This along with a supporting booklet is available for sale at Ramakrishna Mission's book depots. RIMSE conducts Personality Development Programmes for school children. We have brought out videocassettes on meditation in English and Kannada. These are also available for sale. RKVS Old Boys' Association brings out a newsletter bi-annually. Apart from this, as you know, the Ashram brings out a number of spiritual books and audiocassettes.

During its Platinum Jubilee, the Ashram has produced a Multi Media presentation on Indian History titled " India Through the Millenium" (Bhavya Bharata Kanda Sahasramana). It covers in 50 minutes, the historical events of India in a crisp and impactful manner. We now have this on CD. May be you could show this to your members. We also have produced videocassettes of "Kavyarasa Taranga" a dramatic depiction of the Master pieces of famous Kannada literature, which have been televised on many Kannada T V channels.

**Nesaru :** Thank you Swamiji. In conclusion, would you like to say some thing?

**Swami Muktidananda:** Yes. Before sailing to America, Swami Vivekananda visited Mysore in 1892 and was the guest of the Maharaja of Mysore. During his stay there, he met many learned scholars and discussed with them. He carried such a favourable impression of Mysore that in August 1894, in his letter from USA to Sri. Alasinga Perumal, he wrote that Mysore would be in time a strong force to reckon with. The Ramakrishna Ashram of Mysore and its educational institutions have played a key role in making these prophetic words come true.

•


**'ವಿವೇಕಪ್ರಭ' ಪತ್ರಿಕೆಯಲ್ಲಿ ಬರುವ ಮುಖ್ಯಾಂಶಗಳು**

• ಪ್ರಾರ್ಥನೆ • ಸಂಪಾದಕೀಯ • ಶ್ರೀರಾಮಕೃಷ್ಣ, ಸ್ವಾಮಿ ವಿವೇಕಾನಂದ ಮತ್ತು ಇತರ ಸಂತರ ಜೀವನ - ಬೋಧನೆಗಳು ಮಹಾಪುರುಷರ ಸ್ಮೃತಿ ಸಂಕಲನ ಶ್ರೇಷ್ಠ ವ್ಯಕ್ತಿಗಳ ಜೀವನದ ಘಟನಾವಳಿ ಪ್ರಶ್ನೋತ್ತರ ಗಳು ಯುವಕರಿಗೆ ವಿಶೇಷ ಸಲಹೆ ಧರ್ಮ, ದರ್ಶನ, ಮನಶ್ಶಾಸ್ತ್ರ, ವಿಜ್ಞಾನ, ಸಂಸ್ಕೃತಿ ಮುಂತಾದ ವಿಷಯಗಳಿಗೆ ಸಂಬಂಧಿಸಿದ ವೈಚಾರಿಕ ಲೇಖನಗಳು ರಾಮಕೃಷ್ಣ ಸಂಘದ ಚಟುವಟಿಕೆಗಳ ವರದಿ ಮಕ್ಕಳ ವಿಭಾಗ ಸುಭಾಷಿತಗಳು ಪ್ರಹಸನ ಪ್ರಸಂಗ

ಈ ಸಮಾಜದ ಅಭ್ಯುದಯಕಾರ್ಯದಲ್ಲಿ ನಮ್ಮೊಡನೆ ಈ ಮೂಲಕ ಸಹಕರಿಸಿ

ಸಹಾಯಧನ ನೀಡುವ ಮೂಲಕ ಪೋಷಕರಾಗಿ, ಪತ್ರಿಕೆಯ ಆಜೀವ ಚಂದಾದಾರರಾಗಿ, ನಿಮ್ಮ ಸ್ನೇಹಿತರು; ನಿಕಟ ಸಂಬಂಧಿಗಳು ಅಥವಾ ಸಂಸ್ಥೆಗಳಿಗೆ ಪತ್ರಿಕೆಯನ್ನು ಕೊಡುಗೆಯಾಗಿ ನೀಡಿ ಅಥವಾ ಜಾಹೀರಾತಿನ ಮೂಲಕ ನಿಮ್ಮ ಉದ್ಯಮದ ಕಾರ್ಯ ಕ್ಷೇತ್ರವನ್ನು ವಿಸ್ತರಿಸಿ.

ಚಂದಾ ವಿವರ

| | | |
|---|---|---|
| ಬಿಡಿ ಪ್ರತಿಯ ಬೆಲೆ | ರೂ. | 7 |
| ವಾರ್ಷಿಕ ಚಂದಾ | ರೂ. | 70 |
| ಮೂರು ವರ್ಷಗಳಿಗೆ | ರೂ. | 180 |
| ಆಜೀವ ಚಂದಾ (25 ವರ್ಷ) | ರೂ. | 1500 |
| ಪೋಷಕರು | ರೂ. | 3000 |

ಅಥವಾ ಹೆಚ್ಚು

ಪೋಷಕರ ಅಥವಾ ಯಾರ ಹೆಸರಿನಲ್ಲಿ ಸಹಾಯ ಧನ ನೀಡಲಾಗುವುದೋ ಅವರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ ಮತ್ತು ಅವರಿಗೆ ಉಚಿತ ಪತ್ರಿಕೆಯನ್ನು ನಿರಂತರವಾಗಿ ಕಳಿಸಲಾಗುತ್ತದೆ. ರಾಮಕೃಷ್ಣ ಆಶ್ರಮದ ಹೆಸರಿನಲ್ಲಿ ನೀಡಿದ ಸಹಾಯಧನಕ್ಕೆ 80-G ಕಾಯಿದೆಯನ್ನು ಅನ್ವಯ ಆದಾಯ ತೆರಿಗೆ ರಿಯಾಯಿತಿ ಇರುತ್ತದೆ.

ನಿಮ್ಮ ಚಂದಾಹಣವನ್ನು ಸಹಾಯ ಧನವನ್ನು MO ಮೂಲಕ ಅಥವಾ 'Ramakrishna Ashrama, Viveka Prabha A/c.' ಈ ಹೆಸರಿನಲ್ಲಿ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಕಳಿಸಬಹುದು.

ಮಾನವ ಸೇವೆಯ ಈ ಉದಾತ್ತ ಕಾರ್ಯದಲ್ಲಿ ಪಾಲ್ಗೊಳ್ಳಬೇಕೆಂದು ಕೇಳಿಕೊಳ್ಳುತ್ತೇವೆ.

ವಿವರಗಳಿಗೆ ಸಂಪರ್ಕಿಸಿ

ಶ್ರೀ ರಾಮಕೃಷ್ಣ ಆಶ್ರಮ, ವಿವೇಕಪ್ರಭ ವಿಭಾಗ,
ಯಾದವಗಿರಿ, ಮೈಸೂರು 570 020
ದೂರವಾಣಿ : 510535, 412424 ಫ್ಯಾಕ್ಸ್ : 412800
ಇ-ಮೆಯಿಲ್ : vivekaprabha@eth.net





ಪ್ರಾಯೋಜಕರು:-

PAYYADE INTERNATIONAL HOTELS PVT. LTD.
Tel.- 801 28 76, 801 14 68, 801 07 32
Vasanji-Lalji Road, Near Railway Station, Kandivali (W), Mumbai-400 067.

ಕರ್ನಾಟಕ ಮಲ್ಲ

**ಮಕ್ಕಳ ಫೋಟೋ ಸ್ಪರ್ಧೆ**

ಕಳೆದ ವರ್ಷದಂತೆ ಈ ವರ್ಷವೂ 'ಕರ್ನಾಟಕ ಮಲ್ಲ' ಮಕ್ಕಳ ಫೋಟೋ ಸ್ಪರ್ಧೆಯನ್ನು ಏರ್ಪಡಿಸಿದೆ.

ನಿಯಮಗಳು

1. ಯಾವುದೇ ಪ್ರವೇಶ ಶುಲ್ಕವಿಲ್ಲ.
2. ಐದು ವರ್ಷದೊಳಗಿನ ಮಕ್ಕಳ ವಿವಿಧ ಭಂಗಿಯ ಬ್ಲ್ಯಾಕ ಪೋಸ್ಟ್ ಕಾರ್ಡ್ ಅಳತೆಯ ಫೋಟೋ ಮಾತ್ರ ಸ್ವೀಕರಿಸಲಾಗುವುದು.
3. ಮಗುವಿನ ಹೆಸರು, ಜನನ ದಿನಾಂಕ, ಸಂಪೂರ್ಣ ವಿಳಾಸವನ್ನು ಪ್ರತ್ಯೇಕ ಹಾಳೆಯಲ್ಲಿ ಬರೆಯಬೇಕು. ಫೋಟೋದ ಹಿಂದುಗಡೆ ಏನೂ ಬರೆಯಕೂಡದು.
4. ನಿರ್ಣಾಯಕರ ತೀರ್ಮಾನವೇ ಅಂತಿಮ.
5. ಈ ಮೊದಲು ಕಳುಹಿಸಿರುವ ಫೋಟೋಗಳನ್ನು ಸ್ಪರ್ಧೆಗೆ ಪರಿಗಣಿಸಲಾಗುವುದಿಲ್ಲ. ಆದರೆ ಈ ಮೊದಲು ಫೋಟೋಗಳನ್ನು ಕಳುಹಿಸಿರುವವರು ಮತ್ತು ಕಳೆದ ವರ್ಷ ಸ್ಪರ್ಧೆಯಲ್ಲಿ ಭಾಗವಹಿಸಿರುವ ಮಕ್ಕಳ ಬೇರೆ ಫೋಟೋಗಳನ್ನು ಕಳುಹಿಸಬಹುದು.
6. ಒಂದು ಮಗುವಿನ ಒಂದೇ ಭಾವಚಿತ್ರ ಕಳುಹಿಸತಕ್ಕದ್ದು.
7. ವಿಳಾಸದಲ್ಲಿ "ಫೋಟೋ ಸ್ಪರ್ಧೆ" ವಿಭಾಗ ಎಂಬುದಾಗಿ ಕಡ್ಡಾಯವಾಗಿ ಬರೆಯತಕ್ಕದ್ದು.
8. ಬಹುಮಾನ ವಿವರ

| | | | |
|---|---|---|---|
| ಪ್ರಥಮ .................. | ರೂ. 1750/- | ದ್ವಿತೀಯ .................. | ರೂ. 1000/- |
| ತೃತೀಯ .................. | ರೂ. 750/- | 5 ಸಮಾಧಾನಕರ ತಲಾ ...... | ರೂ. 250/- |

9. ಫೋಟೋ ಕಳುಹಿಸಲು ಕೊನೆ ದಿನಾಂಕ 25-10-2001.

ವಿಳಾಸ: *Editor*
**KARNATAKA MALLA** *(KANNADA DAILY)*
ಮಕ್ಕಳ ಫೋಟೋ ಸ್ಪರ್ಧೆ
Gala No. 121, 1st Floor, Narayan Udyog Bhavan, Lalbaug Industrial Estate, Lalbaug, Mumbai-400012.

# LET IT BE, LET MALGUDI BE

Many years ago, novelist R.K.Narayan was shown a map of Malgudi created by Dr. James M. Fennelly, an academic of Adelphi University, for a paper entitled, The City of Malgudi as an Expression of the Ordered Hindu

Cosmos. The writer is believed to have said he was delighted because he had written about Malgudi all his life but never seen it.

At other times, readers all over the world have tried to place a finger on Malgudi in reality. It is Chennai is it Mysore, could it be Coimbatore?

The debate continues after Narayan's death, following Khushwant Singh's suggestion that a place in Tamil Nadu or in Karnataka be named after the fictional town. Fans of Narayan have been dashing off mails to newspapers with proposals. "Surely, it must be Mysore." "Perhaps Chennai and Mysore." "How about the Cantonment Railway Station in Bangalore?" After all; the first time the Muse whispered into Narayan's ear, he saw a train approaching a small railway station. Where little Swami goes to watch trains arrive and depart...

There are some however, who wouldn't want finite boundaries to their Vision. They are not against a tribute to the writer but they fear the literacy Idea might become distinctive and specific. There's a Malgudi in every reader's mind and let it be, they claim.

Malgudi is a kind of static society lost in an endemic trance; a place that we'd see anywhere in India. Nothing dramatic happens there. The commonplace, on the other hand, becomes special. We can recognise a Lawley Road ,an Anand Bhavan coffee house, a Kabir Street, a New Extension Market Road, an Albert Mission School, the Sarayu and even the Mempi Hills from wherever we are.

It is, in fact this astonishing attribute of universality that Narayan create, that gives us the pleasure of revisiting Malgudi every time and finding a new value.

Malgudi has become a metaphor. And as Salman Rushdie says, "so lovingly Made that it has become more vividly real to us than most real places." And for this, the naysayers of actualising Malgudi wouldn't have liked to see a literacy work on celluloid as well. Just like Arundhati Roy reportedly doesn't want The God Of Small Things to be filmed. Although Ayemenem-

"Where May is a hot brooding month"- is real, located a few kilometers away from Kottayam. The sensibility operates thus; If you let the image capture "a piece of imagination", then you've banished a thousand other streams of imagined terrains.

But can anything call an end to imagination? How then does one rate the Stupendous success of Shankar Nag's television serial, Malgudi Days? The Truth is the film captured the milieu just right: Malgudi is undeniably South Indian. Remember Narayan took objection to Vijay Anand shooting The Guide in Rajasthan? Secondly, Narayan's narration is largely simple and Realistic and therefore lends itself to a straightforward depiction.

Which may not be so of the other fictional place popular with this generation- Gabriel Garcia Marquez's Macondo. Critics have found physical commonality with Aracataca, the author's birthplace in Colombia, but the very nature of his story-telling makes visualising a tough proposition.

Especially One Hundred Years of Solitude, where the fantastic becomes normal, and is in Marquez's own words: "A novel which is the very opposite of cinema." A tale that is old with an expressionless face is a paradox in cinema, which by its intrinsic quality lends mood and emotion in a frame.

How could a filmmaker give definite parameters to the elements of mystery in Marquez's master work?

The truth is Gabo himself didn't succeed much, on his own admission. Innocent Erendira, first conceived as a film script and Then written as a novella, sapped his energy for cinema. After a few more unremarkable attempts at the medium, he could only say, "The cinema and I are like an illmatched couple-I can't live with it and I can't live without it."

Literary tales carry with them the baggage of not only the author's vision but also the reader's. Besides, there is the notion that fact is superior to fiction. That fiction deals with some temporality of experience. In essence, fiction triggers kaleidoscopic possibilities of imagination. Therein lies the question of how much one reader's version can be shared by others and how much is left out.

Small wonder then that when literary landscapes are drawn with precise boundaries, some wouldn't want to travel there with others. Reading, all said and done, is a personal journey.

(*Courtesy* : The Times of India)

## CONGRATULATIONS



The President & the members of The Mysore Association and the Nesaru readers hearity congratulate Justice B.N. Srikrishna of the Bombay High Court and a member of our Association on his well-deserved and well-merited elevation as the Chief Justice of the Kerala High Court.

### ರಾಷ್ಟ್ರೀಯ ಕನ್ನಡ ಶಾಲೆಯಲ್ಲಿ ಶಿಕ್ಷಕರ ದಿನಾಚರಣೆ

ಗುರುವಿನ ಗುಲಾಮನಾಗುವ ತನಕ
ದೊರೆಯದಣ್ಣ ಮುಕುತಿ
ಎಂದು ದಾಸ ಶ್ರೇಷ್ಠರು ಹೇಳಿದ್ದಾರೆ.
"ಗುರುಬ್ರಹ್ಮ
ಗುರುವಿಷ್ಣು
ಗುರು ದೇವೋ ಮಹೇಶ್ವರ"

ಎಂದು ವೇದಗಳು ತಿಳಿಸಿದಂತೆ; ಒಬ್ಬ ವ್ಯಕ್ತಿಯ ಅಥವಾ ಒಂದು ಸಮಾಜದ ವಿಕಾಸದಲ್ಲಿ ಶಿಕ್ಷಕನ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಈ ಅಂಶವನ್ನು ಲಕ್ಷ್ಯದಲ್ಲಿಟ್ಟುಕೊಂಡೇ ನಮ್ಮ ಎರಡನೆಯ ರಾಷ್ಟ್ರಪತಿಗಳಾದ ಡಾ. ಸರ್ವಪಳ್ಳಿ ರಾಧಾಕೃಷ್ಣನ್‌ರವರು ಶಿಕ್ಷಕ ವೃತ್ತಿಯ ಮಹತ್ವವನ್ನು ತಿಳಿದು ತಮ್ಮ ಹುಟ್ಟು ಹಬ್ಬವನ್ನು ಶಿಕ್ಷಕ ದಿನಾಚರಣೆಯೆಂದು ಆಚರಿಸಲು ಹೇಳಿದರು.

ಆ ಪ್ರಕಾರ ದೇಶದ ತುಂಬೆಲ್ಲ ಸೆಪ್ಟೆಂಬರ್ 5ನೆಯ ತಾರೀಖಿನಂದು ಶಿಕ್ಷಕ ದಿನಾಚರಣೆ ಆಚರಿಸಲಾಗುತ್ತದೆ.

ನಮ್ಮ ಶಾಲೆಯಲ್ಲಿ ಶಿಕ್ಷಕರ ದಿನಾಚರಣೆಯನ್ನು ಅತಿ, ಸಡಗರದಿಂದ ಆಚರಿಸಲಾಯಿತು. ಈ ಕಾರ್ಯಕ್ರಮಕ್ಕೆ ಸಂಸ್ಥೆಯ ಪದಾಧಿಕಾರಿಗಳು ಆಗಮಿಸಿದ್ದರು. ಮುಖ್ಯ ಅತಿಥಿಗಳಾಗಿ V.J.T.I. ಕಾಲೇಜಿನ ಪ್ರಾಂಶುಪಾಲರಾದ ಡಾ. ಸತೀಶ ವರಣಕರ್‌ರು ಆಗಮಿಸಿದ್ದರು. ಶಿಕ್ಷಕರು ಮತ್ತು ವಿದ್ಯಾರ್ಥಿಗಳನ್ನು ಕುರಿತು ಆದರ್ಶ ಶಿಕ್ಷಕನಲ್ಲಿ ಇರಬೇಕಾದ ಗುಣಗಳ ಬಗ್ಗೆ ಹೇಳುತ್ತಾ "ಸಾಮಾನ್ಯ ಶಿಕ್ಷಕ ವಿದ್ಯೆಯನ್ನು ಕಲಿಸುತ್ತಾನೆ. ಒಳ್ಳೆಯ ಶಿಕ್ಷಕ ಪಾಠವನ್ನು ವಿವರಿಸುತ್ತಾನೆ. ಆದರ್ಶ ಶಿಕ್ಷಕ ವಿದ್ಯೆಯ ಜೊತೆಗೆ ಹುರಿದುಂಬಿಸುತ್ತಾನೆ ಮತ್ತು ಒಳ್ಳೆಯ ನಾಗರಿಕರನ್ನು ನಿರ್ಮಿಸುತ್ತಾನೆ ಎಂದು ಸುಂದರವಾಗಿ ವಿವರಿಸಿದರು.

ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಎಸ್. ಸುಬ್ರಮಣಿಯವರು ಮುಖ್ಯ ಅತಿಥಿಗಳ ಬಗ್ಗೆ ಮಾತನಾಡುತ್ತಾ ಅತಿಥಿಗಳ ಅನುಭವ ಕಾರ್ಯ ವೈಖರಿಗಳನ್ನು ತಿಳಿಸುತ್ತಾ ಗೌರವಿಸಿದರು.

ಕಾರ್ಯಕ್ರಮದ ಕೊನೆಗೆ ಶಿಕ್ಷಕರಾದ ಶ್ರೀ ರಾಮ ಆಚಾರ್ಯರು ವಂದನಾರ್ಪಣೆ ಮಾಡಿದರು.

## ವಡಾಲದ ರಾಷ್ಟ್ರೀಯ ಕನ್ನಡ ಶಾಲೆಯಲ್ಲಿ ಗಣೇಶೋತ್ಸವ



ಅಲಂಕೃತವಾದ ಗಣಪತಿಯ ಮೂರ್ತಿ

ವಡಾಲದ ರಾಷ್ಟ್ರೀಯ ಕನ್ನಡ ಶಾಲೆಯಲ್ಲಿ ಶಾಲಾ ಸಂಸ್ಥೆಯವರು ಮತ್ತು ಶಿಕ್ಷಕವೃಂದದವರು ಪ್ರತೀ ವರ್ಷದಂತೆ ಈ ಬಾರಿಯು ಕೂಡ ಗಣೇಶೋತ್ಸವವನ್ನು ಬಹಳ ವಿಜ್ರಂಭಣೆಯಿಂದ ಆಚರಿಸಲಾಯಿತು.

ಪ್ರತಿನಿತ್ಯ ಭಜನೆ, ಪೂಜೆ, ಶಿಕ್ಷಕರಿಂದ ಹಾಗೂ ವಿದ್ಯಾರ್ಥಿ ಗಳಿಂದ ನಡೆಯಿತು. ಶಾಲಾ ಸಂಸ್ಥೆಯ ಪದಾಧಿಕಾರಿಗಳು ಆಗಮಿಸಿ ಶ್ರೀ ಗಣೇಶನಿಗೆ ಆರತಿ ಬೆಳಗಿಸಿ ಈ ಪೂಜಾ ಕಾರ್ಯಕ್ರಮದಲ್ಲಿ ಬಹಳ ಮುತುವರ್ಜಿಯಿಂದ ಭಾಗವಹಿಸಿದರು. 7 ದಿನಗಳ ಕಾಲ ಗಣೇಶ ವಿಗ್ರಹವನ್ನು ಶಾಲೆಯಲ್ಲಿ ಪೂಜಿಸಿದ ಸಂದರ್ಭದಲ್ಲಿ ಶಾಲಾ ಹಳೆವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿಗಳ ಪಾಲಕರು ಶ್ರೀ ಗಣೇಶನ ದರ್ಶನಗೈದು ಶ್ರೀ ಗಣೇಶನ ಕೃಪೆಗೆ ಪಾತ್ರರಾದರು.

ಗಣೇಶೋತ್ಸವ ಸಂದರ್ಭದಲ್ಲಿ ಕರ್ಮಯೋಗಿ ಕೌಸ್ತುಭ ಶ್ರೀ ಮೋಹನದಾಸ ಸ್ವಾಮೀಜಿ, 'ಶ್ರೀಧಾಮ' ಮಾಣಿಲ, ಬಂಟ್ವಾಳ ಇವರು ಆಗಮಿಸಿ ನೆರೆದಿದ್ದ ಭಕ್ತರು, ಶಿಕ್ಷಕವೃಂದ ಹಾಗೂ ವಿದ್ಯಾರ್ಥಿಗಳಿಗೆ ಆಶೀರ್ವಚನಗೈದರು.

10ನೇ ತರಗತಿಯ ವಿದ್ಯಾರ್ಥಿಗಳಿಂದ ವಿಶೇಷ ಪೂಜೆ ಜರುಗಿತು. ಶಾಲೆಯ ನಿವೃತ್ತ ಪ್ರಾಂಶುಪಾಲರಾದ ಶ್ರೀಮತಿ ವಸುಂಧರಾ ರಾವ್‌ರವರು ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಗಣೇಶೋತ್ಸವದ ಬಗ್ಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿ ಶ್ರೀ ಗಣೇಶನ ಧ್ಯಾನ, ಭಜನೆ ಹಾಗೂ ಪೂಜೆ ಪುರಸ್ಕಾರಗಳಿಂದ ಮನಸ್ಸು ನಿರ್ಮಲವಾಗಿ ವಿದ್ಯಾರ್ಥಿಗಳು ಉತ್ತಮ ಸಂಸ್ಕಾರವಂತರಾಗಲು ಈ ರೀತಿಯ ಕಾರ್ಯಕ್ರಮಗಳು ಅವಶ್ಯಕ ಎಂದು ತಿಳಿಸುತ್ತಾ ವಿದ್ಯಾರ್ಥಿಗಳ ಮುಂದಿನ ಭವಿಷ್ಯ ಸುಗಮವಾಗಿ ಸಾಗಲಿ ಎಂದು ಹಾರೈಸಿದರು.

7 ದಿನಗಳ ಕಾಲ ವಿಜೃಂಭಣೆಯಿಂದ ಪೂಜಿಸಿದ ಗಣೇಶನನ್ನು ದಾದರ್ ಶಿವಾಜಿ ಪಾರ್ಕಿನಲ್ಲಿ ವಿಸರ್ಜಿಸಲಾಯಿತು. ಪೂಜೆಯ ಪ್ರತಿಯೊಂದು ಕಾರ್ಯಕ್ರಮದಲ್ಲಿ ಶಾಲಾ ಕಾರ್ಯದರ್ಶಿ ಎಸ್. ಸುಬ್ರಮಣಿ ಕಾರ್ಯಕಾರಿ ಸಮಿತಿಯ ಸದಸ್ಯರಾದ ಕೆ.ಎಮ್. ಕೀರ್ತಿ ಹಾಗೂ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸರೋಜರಾವ್ ಭಾಗವಹಿಸಿ ಪೂಜೆಯ ಪ್ರತಿಯೊಂದು ಸಂದರ್ಭದಲ್ಲಿ ತನು-ಮನ-ಧನವನ್ನಿತ್ತು ಸಹಕರಿಸಿದ ಪ್ರತಿಯೊರ್ವರಿಗೂ ಕೃತಜ್ಞತೆಯನ್ನು ಸಲ್ಲಿಸಿದರು.

## ಕರ್ನಾಟಕ ಸಂಘ, ಮುಂಬಯಿಯಲ್ಲಿ ಶ್ರಾವಣ ಕಾವ್ಯವಾಚನ

ಕರ್ನಾಟಕ ಸಂಘ ಮುಂಬಯಿಯ 'ಸಾಹಿತ್ಯ ಭಾರತಿ'ಯು ಸುಮಾರು ಒಂದು ದಶಕದಿಂದ ಶ್ರಾವಣ ಕವಿಗೋಷ್ಠಿಯನ್ನು ಆಯೋಜಿಸುತ್ತಾ ಬಂದಿದೆ. ಕೆಲವು ವರ್ಷ ಇದರ ಅಸ್ತಿತ್ವವಿರದಿದ್ದರೂ ಹೊಸ ಕಮಿಟಿಯು ಪುನಃ ಯಶಸ್ವೀಯಾಗಿ ನಡೆಸುತ್ತಿರುವುದು ಶ್ಲಾಘನೀಯ ಎಂದು ಕನ್ನಡ ವಿಖ್ಯಾತ ಹಿರಿಯ ಕವಿ ಬಿ.ಎ. ಸನದಿ ದಿನಾಂಕ 19-08-01ರಂದು ನಡೆದ ಶ್ರಾವಣ ಕಾವ್ಯವಾಚನ ಗಾಯನ ಗೋಷ್ಠಿ ಕಾರ್ಯಕ್ರಮದ ಅಧ್ಯಕ್ಷ ಸ್ಥಾನದಿಂದ ಮಾತಾಡುತ್ತಿದ್ದರು. ಶ್ರೀಯುತರು ಮುಂದುವರಿಯುತ್ತಾ ಇಂದಿನ ಕವಿಗೋಷ್ಠಿ 'ದಾಂಪತ್ಯ ಗೀತೆಯ' ಮೇಲಿದ್ದು ಕವಿಗಳು ಬೇರೆ ಬೇರೆ ಇಂದ್ರಿಯದ ಮೂಲಕ ಪಡೆದ ಅನುಭವದ ಅಭಿವ್ಯಕ್ತಿ ಸಾಮೂಹಿಕವಾಗಿ ನಿಮ್ಮ ಮುಂದೆ ಇಟ್ಟರೂ ಪ್ರತ್ಯೇಕತೆಯನ್ನು ಕಾಣುತ್ತೇವೆ. 'ದಾಂಪತ್ಯಗೀತೆ' ರಾಮಾಯಣ ಮಹಾಭಾರತ ಕಾಲದಿಂದಲೂ ಪ್ರಧಾನವಾಗಿ ಮೂಡಿ ಬಂದಿದೆ. ಭರತೇಶನ ವೈಭವ, 'ಹದಿಬದೆಯ ಧರ್ಮದಲ್ಲೂ ಬಹು ಸುಂದರವಾಗಿ ದಾಂಪತ್ಯ ಗೀತೆಯನ್ನು ವರ್ಣಿಸಿದ್ದನ್ನು ನಾವು ಕಾಣಬಹುದು. ರವೀಂದ್ರನಾಥ ಟಾಕೂರರ ಸಮಕಾಲೀನ 'ಖಲೀಲ್ ಇಬ್ರಾಹಿಮ್'ನ ಸಣ್ಣ ಕತೆಗಳಲ್ಲಿ ಇದರ ಮಹತ್ವವನ್ನು ಕಾಣುತ್ತೇವೆ. ಇಂದಿನ ಕಾರ್ಯಕ್ರಮದಲ್ಲಿ ಪದ್ಮನಾಭ ಸುಹಿತ್ತು ಕವಿಗಳ ಕವನಗಳಿಗೆ ಅತ್ಯುತ್ತಮವಾಗಿ ರಾಗ ಸಂಯೋಜಿಸಿದ್ದಾರೆ. ಹಾಗೂ ಅವರ ಬಳಗದವರು ಅಷ್ಟೇ ಸುಮಧುರವಾಗಿ ಹಾಡಿದ್ದಾರೆ. ಇದೊಂದು ಹೊಸ ಪ್ರಯೋಗವಾದರೂ ಯಶಸ್ವಿಯಾಗಿದೆ ಎಂದು ಪ್ರಶಂಸಿದರು. ಕೊನೆಗೆ ತಾವು ರಚಿಸಿದ ಒಂದು ಕಾವ್ಯವನ್ನು ವಾಚಿಸಿದರು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ನವ್ಯಕವಿ ಅರವಿಂದ ನಾಡಕರ್ಣಿಯವರು ದೀಪ ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸುತ್ತಾ 'ದಾಂಪತ್ಯದ' ಬಗೆ ಬರೆಯುವುದು ತುಂಬಾ ಕಷ್ಟ ಎಂದು ಹೇಳಿ ತಾವು ದಾಂಪತ್ಯದ ಹೊಸ್ತಿಲಲ್ಲಿ ಬರೆದ ರಾಧ ಮಾಧವರ ರೂಪಕವನ್ನು ವಾಚಿಸಿದರು.

ಪ್ರಸ್ತಾವಿಕವಾಗಿ ಸಂಘದ ಅಧ್ಯಕ್ಷ ರವಿ ರಾ. ಅಂಚನ್‌ರವರು ಮಾತಾಡುತ್ತಾ 'ಋತು ಚಕ್ರದ ತಿರುಗುವಿಕೆಗೆ ವಿಶಿಷ್ಟ ಮಹತ್ವವಿದೆ. ಶ್ರಾವಣ ಋತು ಕವಿಗಳ ಸೃಜನ ಶೀಲತೆಗೆ ಸೂಕ್ತಕಾಲ, ಫಲವಂತಿಕೆಯ ಸಂಪತ್ತು, ಬಿನ್ನ ಜನಾಂಗಗಳ ಹಬ್ಬ ಹರಿದಿನಗಳ ಆಚರಣೆ ಹಾಗೂ ಜೀವ ಕ್ರಿಯೆಯ ಸಮೃದ್ಧಿಯ ಕಾಲವಿದು. ಕರ್ನಾಟಕ ಸಂಘವು ಶ್ರಾವಣ ಕವಿ ಗೋಷ್ಠಿಯನ್ನು ಈ ಸಲ ಪ್ರಯೋಗಾತ್ಮಕವಾಗಿ ಆಯೋಜಿಸಿದೆ. ಜೀವನದಲ್ಲಿ 'ದಾಂಪತ್ಯವು' ಒಂದು ಮಹತ್ವದ ಘಟ್ಟ ವೈವಿಧ್ಯತೆಯಿಂದ ಕೂಡಿದ ಈ ಮಹತ್ವದ ಘಟ್ಟವನ್ನು ಕವಿಗಳು ಹೇಗೆ ಅಭಿವ್ಯಕ್ತಗೊಳಿಸುತ್ತಾರೆ ಎಂಬ ಕುತೂಹಲ. ಇಂದಿನ ಯುವ ಜನಾಂಗದಲ್ಲಿ ಕಾವ್ಯ ನಿರ್ಮಾಣದ ಉತ್ಸುಕತೆ ಕಡಿಮೆಯಾಗುತ್ತಿದೆ. ಈ ಕೊರತೆಯನ್ನು ನೀಗಲು ಇಂತಹ ಕವಿಗೋಷ್ಠಿ ಪ್ರೇರಕವಾಗಬಹುದೆಂದು' ತಿಳಿಸಿದರು.

'ಶ್ರಾವಣ ಕಾವ್ಯ ವಾಚನ ಗಾಯನ ಗೋಷ್ಠಿ' ಕಾರ್ಯಕ್ರಮವು ಪದ್ಮನಾಭ ಸುಹಿತ್ತು ಹಾಗೂ ಅವರ ಬಳಗದವರ ಪ್ರಾರ್ಥನೆಯಿಂದ ಆರಂಭಗೊಂಡಿತು.

ಅರವಿಂದ ನಾಡಕರ್ಣಿ, ಬಿ.ಎ. ಸನದಿ, ಪದ್ಮನಾಭ ಹಾಗೂ ಅವರ ಬಳಗ ಮತ್ತು ಕವಿ/ಕವಯತ್ರಿಯರಿಗೆ ರವಿ ರಾ. ಅಂಚನ್‌ರವರು ಹೂ ಗುಚ್ಛಕೊಟ್ಟು ಗೌರವಿಸಿದರು.

ಭಾಗವಹಿಸಿದ ಕವಿ / ಕವಯತ್ರಿಯವರು ಹಾಗು ಅವರ ಕವನ; ಜಿ. ವಿ. ಕಂಚುಗಾರ - 'ಸಂಗಾತಿ', ತುಳಸಿವೇಣುಗೋಪಾಲ 'ಈ ಮುನಿಸು', ಎಚ್. ದುಂಡಿರಾಜ್ - 'ನಾನು ಮತ್ತು ಅವಳು', ಹಾ.ಮಾ. ಕನಕ - 'ಆ ದೂರ ಸನಿಹ', ವಿ.ಎಸ್. ಶಾನ್‌ಭಾಗ್ - 'ಹೆಸರೇನು ಇದಲೇ ಕವಿತಾ?', ಜಿ.ಪಿ. ಕುಸುಮಾ - 'ಮದ್ವೆ, ಮದ್ವೆ, ಮದ್ವೆ', ಸಾ. ದಯಾ - 'ನನ್ನ ಶ್ರಾವಣ', ಗೋಪಾಲ ತ್ರಾಸಿ - 'ಮುತ್ತಿನರ ಮನೆಯೊಳಗೆ ನನ್ನ ನಲ್ಲೆ', ಕೆ. ಜಯರಾಮ ಆಳ್ವರ ಅನುಪಮ ಸ್ಥಿತಿಯಲ್ಲಿ ಧರ್ಮಪತ್ನಿ ವಿಲಾಸಿನಿ ಆಳ್ವರಿದ್ದರು. ಕಾವ್ಯವಾಚನವನ್ನು ಭರತ್‌ಕುಮಾರ್ ಪೊಲಿಪು ಮಾಡಿದರು. ಜಯರಾಮ ಆಳ್ವರ ಕವನ - 'ಪತ್ನಿಗೊಂದು ಪತ್ರ' ಅರವಿಂದ ನಾಡಕರ್ಣಿಯವರ - 'ಮರಗಳೇ', ಬಿ.ಎ. ಸನದಿಯವರ - 'ಪ್ರತಿಬಿಂಬ'

ಕವನಗಳಿಗೆ ರಾಗ ಸಂಯೋಜಿಸಿದ ಪದ್ಮನಾಭ ಸುಹಿತ್ತುರವರಿಗೆ ಸಹಕರಿಸಿದ ಅವರ ಬಳಗದವರು ಶೇಖರ್ ಸಾಲ್ಯಾನ್ - ಹಾರ್ಮೋನಿಯಂ, ರಾಜೇಶ ವಕ್ವ ಶೇಖರ್ - ಗಿಟಾರ್, ಅರುಣ ಕುಮಾರ್ - ತಬ್ಲಾ, ಗಾಯಕ ಗಾಯಕಿಯರು ಆಶಾರಾವ್, ಗಣೇಶ್ ಡಿ.ಕೆ., ಪ್ರವೀಣ್ ಬೈಕಂಪಾಡಿ ಹಾಗೂ ರವೀಂದ್ರ ಸಾಲ್ಯಾನ್.

ಸಂಘದ ಗೌ. ಕಾರ್ಯದರ್ಶಿ ಭರತ್‌ಕುಮಾರ್ ಪೊಲಿಪು ಕಾರ್ಯಕ್ರಮನ್ನು ಯಶಸ್ವಿಯಾಗಿ ನಿರ್ವಹಿಸಿ ಕೊನೆಗೆ ವಂದನಾರ್ಪಣೆಗೈದರು

## ಕರ್ನಾಟಕ ಸಂಘದಲ್ಲಿ ಉಚಿತ ವೈದ್ಯಕೀಯ ಶಿಬಿರ

ಕನ್ನಡ ಮ.ನ.ಪಾ. ಶಾಲೆಯ ಮಕ್ಕಳ 'ದಂತ ರಕ್ಷಣೆ' ಮತ್ತು ಸಾಮಾನ್ಯ ವೈದ್ಯಕೀಯ ಪರೀಕ್ಷಣಾ ಶಿಬಿರವನ್ನು ಕರ್ನಾಟಕ ಸಂಘವು ಹಮ್ಮಿಕೊಂಡಿರುವದು ಶ್ಲಾಘನೀಯ ಎಂದು ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿಯಾಗಿ ಆಗಮಿಸಿದ ಮುಂಬಯಿಯ ವೈದ್ಯಕೀಯ ಕ್ಷೇತ್ರದಲ್ಲಿ ಪ್ರಸಿದ್ಧರಾಗಿರುವ ಡಾ. ಭುಜಂಗ ಯು. ಪೈಯವರು ಸಮಾರಂಭವನ್ನು ವಿದ್ಯುಕ್ತ ವಾಗಿ ಉದ್ಘಾಟಿಸುತ್ತಾ ಹೇಳಿದರು. ಶ್ರೀಯುತರು ಮುಂದುವರಿಯುತ್ತಾ ನಾನು ಮೂಲತಃ ಕನ್ನಡಿಗನು ನನಗೆ ನಿಮ್ಮೆಲ್ಲರ ಜೊತೆ ಈ ಸಮಾರಂಭದಲ್ಲಿ ಪಾಲ್ಗೊಳ್ಳಲು ಕರ್ನಾಟಕ ಸಂಘ ಅವಕಾಶ ಕೊಟ್ಟಿದ್ದಕ್ಕೆ ಅಭಾರಿಯಾಗಿದ್ದೇನೆ ಎಂದು ತಮಗಾದ ಆನಂದವನ್ನು ವ್ಯಕ್ತಗೊಳಿಸಿದರು.

'ಹೃದಯವೇ ದೇಗುಲ ಆರೋಗ್ಯವೇ ಭಾಗ್ಯ' ಎಂಬ ನಾಣ್ಣುಡಿಯಂತೆ ಕರ್ನಾಟಕ ಸಂಘ ಮುಂಬಯಿ ಯು ಯುವ ವಿಭಾಗದ ಆಶ್ರಯದಲ್ಲಿ ಇಂದು ಮ.ನ.ಪಾ. ಕನ್ನಡ ಶಾಲಾ ಮಕ್ಕಳ 'ಆರೋಗ್ಯದ' ಸಲುವಾಗಿ ವೈದ್ಯಕೀಯ

ಶಿಬಿರವನ್ನು ಉಚಿತವಾಗಿ ಆಯೋಜಿಸಿದೆ ಎಂದು ಕರ್ನಾಟಕ ಸಂಘದ ಅಧ್ಯಕ್ಷರಾದ ರವಿ ರಾ. ಅಂಚನ್‌ರವರು ದಿನಾಂಕ 15-08-01ರಂದು ನಡೆದ ಉಚಿತ ವೈದ್ಯಕೀಯ ಶಿಬಿರದ ಉದ್ಘಾಟನೆ ಸಮಾರಂಭದ ಅಧ್ಯಕ್ಷ ಸ್ಥಾನದಿಂದ ಮಾತನಾಡುತ್ತಿದ್ದರು. ಶ್ರೀಯುತರು ಮುಂದುವರಿಯುತ್ತಾ, ಕನ್ನಡ ಶಾಲೆಯ ಮಕ್ಕಳಿಗೋಸ್ಕರ ಆಯೋಜಿಸಿರುವ ಈ ಶಿಬಿರಕ್ಕೆ ಕಾಲ್‌ಗೇಟ್ ಪಾಮೋಲೀವ್‌ರವರ ಸಹಭಾಗಿತ್ವ ಹಾಗು ಡಾ. ಪೃಥ್ವಿ ಮಿರಾಜ್‌ಕರ್, ಡಾ. ಸುಯೋಗ್ ಕುಲಕರ್ಣಿ, ಡಾ. ಶರ್ಮಿಳಾ ಕುಲಕರ್ಣಿ, ಡಾ. ಸೋಮನ್ ಮತ್ತು ಡಾ. ಅರ್ಚನಾ ಜಾದವ್‌ರವರ ಸಹಕಾರವೂ ದೊರೆತಿರುವುದರಿಂದ ನಮ್ಮ ಉತ್ಸಾಹವು ಇಮ್ಮಡಿಯಾಗಿದೆ ಎಂದು ತಿಳಿಸಿದರು.

ಕರ್ನಾಟಕ ಸಂಘದಲ್ಲಿ ದಂತ ಚಿಕಿತ್ಸೆಯ ಶಿಬಿರವನ್ನು ಏರ್ಪಡಿಸಬೇಕೆಂಬ ತನ್ನ ಇಚ್ಛೆಯನ್ನು ವ್ಯಕ್ತಪಡಿಸಿದಾಗ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯು ಮನ್ನಣೆಕೊಟ್ಟು ಈ ಶಿಬಿರವನ್ನು ಹಮ್ಮಿಕೊಂಡಿರುವುದು ನನಗೆ ತುಂಬಾ ಸಂತೋಷವಾಗಿದೆ ಎಂದು ದಂತ ವೈದ್ಯ ಡಾ. ಪೃಥ್ವಿ ಮಿರಾಜ್‌ಕರ್ ತಿಳಿಸಿದರು.

ಡಾ. ಸುಯೋಗ್ ಕುಲಕರ್ಣಿ, ಡಾ. ಶರ್ಮಿಳಾ ಕುಲಕರ್ಣಿ, ಡಾ. ಸೋಮನ್ ಮತ್ತು ಡಾ. ಅರ್ಚನಾ ಜಾಧವ್‌ರವರು ಅಲೋಪತಿ ಹಾಗೂ ಆಯುರ್ವೇದ ಚಿಕಿತ್ಸೆಯಿಂದ ಆಗುವ ಲಾಭಗಳ ಬಗ್ಗೆ ತಿಳಿಸಿದರು.

ಉದ್ಘಾಟನಾ ಸಮಾರಂಭವು ಗಾಯತ್ರಿ ರಾಮು ರವರ ಪ್ರಾರ್ಥನೆಯಿಂದ ಆರಂಭಗೊಂಡಿತು.

ಮುಖ್ಯ ಅತಿಥಿ ಡಾ. ಭುಜಂಗ ಪೈ ಮತ್ತು ಡಾ. ಶರ್ಮಿಳಾ ಕುಲಕರ್ಣಿಯವರಿಗೆ ಅಧ್ಯಕ್ಷ ರವಿ ರಾ. ಅಂಚನ್‌ರವರು ಹೂಗುಚ್ಛ ಕೊಟ್ಟು ಗೌರವಿಸಿದರು.

ಶಿಬಿರದ ಉಳಿದ ವೈದ್ಯರಿಗೆ ಸಂಘದ ಉಪಾಧ್ಯಕ್ಷ ಎಮ್. ಎಮ್. ಕೋರಿಯವರು ಹೂ ಗುಚ್ಛ ಕೊಟ್ಟು ಗೌರವಿಸಿದರು.

ಯುವ ವಿಭಾಗದ ಸಂಚಾಲಕ ದಿನೇಶ್ ಕುಡ್ವರವರು ಮುಖ್ಯ ಅತಿಥಿಯವರ ಪರಿಚಯ ನೀಡಿದರೆ ಶಿಬಿರದ ಉಳಿದ ವೈದ್ಯರ ಪರಿಚಯ ವಸಂತ ಶ್ರೀಯವರು ನೀಡಿದರು. ಕಾರ್ಯಕ್ರಮದ ನಿರ್ವಹಣೆ ಗೌ. ಕಾರ್ಯದರ್ಶಿ ಭರತ್‌ಕುಮಾರ್ ಪೊಲಿಪು ಮಾಡಿದರು. ದಿನೇಶ್ ಕೋಟ್ಯಾನ್ ವಂದನಾರ್ಪಣೆಗೈದರು. 220 ಕನ್ನಡ ಶಾಲಾ ಮಕ್ಕಳು ಈ ಶಿಬಿರದ ಲಾಭವನ್ನು ಪಡೆದರು.

**ಮುಂಬಯಿ ವಿಶ್ವವಿದ್ಯಾಲಯದಲ್ಲಿ ಕನ್ನಡ ಸರ್ಟಿಫಿಕೇಟ್ ಮತ್ತು ಡಿಪ್ಲೊಮೊ ತರಗತಿಗಳ ಆರಂಭ**

ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗವು ವರ್ಷಂಪ್ರತಿ ನಡೆಸಿಕೊಂಡು ಬರುತ್ತಿರುವ ಕನ್ನಡ ಸರ್ಟಿಫಿಕೇಟ್ ಮತ್ತು ಡಿಪ್ಲೊಮೊ ತರಗತಿಗಳ ಉದ್ಘಾಟನೆ ಇತ್ತೀಚೆಗೆ ಕಲಿನಾ ಕ್ಯಾಂಪಸ್‌ದಲ್ಲಿ ನೆರವೇರಿತು.

ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕವಿ, ಸಾಹಿತಿ ಡಾ. ಜಿ.ವಿ. ಕುಲಕರ್ಣಿ, ಅವರು ಆಗಮಿಸಿದ್ದರು. ಭಾಷೆ ನಮ್ಮೆಲ್ಲರನ್ನು ಬೆಸೆಯುವ ಕೊಂಡಿಯಾಗಿದೆ. ಹೊಸ ಭಾಷೆಗಳನ್ನು ಕಲಿಯುವುದರ ಮೂಲಕ ನಾವು ಶ್ರೀಮಂತರಾಗುತ್ತೇವೆ. ಮುಂಬಯಿ ಯಂಥ ಮಹಾ ನಗರದಲ್ಲಿ ಅನೇಕ ಭಾಷೆಗಳ ನಡುವೆ ಸಾಂಸ್ಕೃತಿಕ ರಾಯಭಾರಿಯಾಗಿ ಕೆಲಸ ಮಾಡಲು ಹೆಚ್ಚು ಹೆಚ್ಚು ಭಾಷೆಗಳನ್ನು ಕಲಿಯಬೇಕಾದ ಅಗತ್ಯವಿದೆ. ಭಾಷೆಯ ಮೂಲಕವೇ ಸಾಹಿತ್ಯದ ಸೊಗಸನ್ನು ಅರಿಯಲು ಸಾಧ್ಯವಾಗುತ್ತದೆ ಎಂದವರು ಅಭಿಪ್ರಾಯಪಟ್ಟರು. ಬೇಂದ್ರೆ ಅವರ ಮನೆಮಾತು ಮರಾಠಿ ಆದರೂ ಅವರು ಕನ್ನಡದಲ್ಲಿ ಸಾಹಿತ್ಯ ರಚಿಸಿ ರಾಷ್ಟ್ರ ಮಟ್ಟದಲ್ಲಿ ಬೆಳಗಿದರು. ಸೃಜನಶೀಲ ಚಟುವಟಿಕೆಗೆ ಭಾಷೆ ಪೂರಕವಾಗಬಲ್ಲದು. ಕನ್ನಡ ಭಾಷೆ ಅತ್ಯಂತ ಶ್ರೀಮಂತವಾದುದು. ಕನ್ನಡೇತರರು ಇದನ್ನು ಕಲಿಯಲು ಮುಂದಾಗುತ್ತಿರುವುದು ಸಂತೋಷದ ಸಂಗತಿ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಡಾ. ಸಂಜೀವ ಶೆಟ್ಟಿ ಅವರು ಭಾರತದ ಹಿರಿಮೆ ಅಡಗಿರುವುದು ವೈವಿಧ್ಯದಲ್ಲಿ, ನಮ್ಮ ಭಾಷೆಗಳು ಯಾವಾಗಲೂ ರಾಷ್ಟ್ರೀಯ ಏಕತೆಗೆ ಅಡ್ಡಿಯಾಗಿಲ್ಲ. ನಮಗೆ ವಿದೇಶಿ ಭಾಷೆ ಹಾಗೂ ಅಲ್ಲಿನ ಸಾಹಿತ್ಯ ಸಂಸ್ಕೃತಿಗಳ ಬಗೆಗೆ ಗೊತ್ತಿದೆ. ಆದರೆ ನಮ್ಮ ನೆರೆಯ ಭಾಷೆಗಳ ಬಗೆಗೆ ಒಂದು ರೀತಿಯ ತಾತ್ಸಾರ ಭಾವನೆಯಿದೆ. ಇದು ಸರಿಯಲ್ಲ. ಇಂಥ ಕೊರತೆಗಳನ್ನು ತುಂಬಿಕೊಡುವಲ್ಲಿ ಸರ್ಟಿಫಿಕೇಟ್ ಹಾಗೂ ಡಿಪ್ಲೊಮೊ ತರಗತಿಗಳಿಗೆ ವಿಶೇಷ ಮಹತ್ವವಿದೆ. ಎಂದವರು ಅಭಿಪ್ರಾಯಪಟ್ಟರು. ಭಾಷೆ ಬಾಂಧವ್ಯದ ಸಂಕೇತ. ಜನರನ್ನು ಒಂದು ಗೂಡಿಸಬೇಕು. ಮಾತೃ ಭಾಷೆಯನ್ನು ಮರೆತರೆ ನಮ್ಮ ಅಸ್ತಿತ್ವವೇ ಕಳೆದುಹೋಗುತ್ತದೆ. ನಮ್ಮ ತಾಯಂದಿರು ತಪ್ಪದೇ ತಮ್ಮ ಮಕ್ಕಳಿಗೆ ಮಾತೃಭಾಷೆಯನ್ನು ಹೇಳಿಕೊಡಬೇಕೆಂದು ವಿನಂತಿಸಿ ಕೊಂಡರು.

ಕನ್ನಡ ವಿಭಾಗದ ಮುಖ್ಯಸ್ಥ ಡಾ. ಜಿ.ಎನ್. ಉಪಾಧ್ಯ ಅವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಭಾಷಾ ಬಂಧನ ಇಂದಿನ ಅಗತ್ಯಗಳಲ್ಲಿ ಒಂದು. ಕನ್ನಡ ವಿಭಾಗ ಉನ್ನತ ಅಧ್ಯಯನದ ಜೊತೆಜೊತೆಗೆ ಕನ್ನಡೇತರರಿಗೆ ಕನ್ನಡ ಕಲಿಸುವ ಕೆಲಸವನ್ನು ಮಾಡುತ್ತಾ ಬಂದಿದೆ. ಇದಕ್ಕೆ ಒಳ್ಳೆಯ ಪ್ರತಿಕ್ರಿಯೆಯೂ ವ್ಯಕ್ತವಾಗಿದೆ ಎಂದರು. ಇದೇ ಸಂದರ್ಭದಲ್ಲಿ ಕಳೆದ ಸಾಲಿನ ಕನ್ನಡ ಸರ್ಟಿಫಿಕೇಟ್ ತರಗತಿಗಳಲ್ಲಿ ಕ್ರಮವಾಗಿ ಮೊದಲ ಮೂರು ಸ್ಥಾನ ಪಡೆದ ಅಂಜನಾ ಸುಧೀಂದ್ರ, ರಾಘವೇಂದ್ರ, ಅನಘಾ ಮಠದ ಅವರನ್ನು ನೆನಪಿನ ಕಾಣಿಕೆ ನೀಡಿ ಸತ್ಕರಿಸಲಾಯಿತು. ಡಿಪ್ಲೊಮದಲ್ಲಿ ಮೊದಲ ಸ್ಥಾನ ಪಡೆದ ಗಾಯತ್ರೀ ಮೂರ್ತಿ ಹಾಗೂ ಶುಭ ಅವರನ್ನು ಸಹ ಸತ್ಕರಿಸಲಾಯಿತು. ಇದಲ್ಲದೆ ಚಿತ್ರದುರ್ಗದ ಬಸವ ತತ್ವ ಮಹಾವಿದ್ಯಾಲಯ ಈ ವರ್ಷ ನಡೆಸಿದ ವಚನ ಕಮ್ಮಟ ಪರೀಕ್ಷೆಯಲ್ಲಿ ರಾಜ್ಯಮಟ್ಟದಲ್ಲಿ ದ್ವಿತೀಯ ರ‍್ಯಾಂಕ್ ಪಡೆದ ರೆಜಿನಾಲ್ಡ್ ಡಿ ಸೋಝಾ ಅವರನ್ನು ಗೌರವಿಸಲಾಯಿತು. ಮುಂಬಯಿ ವಿಶ್ವವಿದ್ಯಾಲಯ ವಿದ್ಯಾರ್ಥಿ ಪರಿಷತ್‌ಗೆ ಆಯ್ಕೆಯಾದ ಶ್ರೀ ಮಂಜುನಾಥ್, ಉಪನಗರಗಳಲ್ಲಿ ಕನ್ನಡೇತರರಿಗೆ ಕನ್ನಡವನ್ನು ಕಲಿಸಿದ ಅಧ್ಯಾಪಕರಾದ ಶ್ರೀ ವೈ.ಕೆ. ರಾವ್ ನವಿಮುಂಬಯಿ ಹಾಗೂ ಶ್ರೀಮತಿ ಸುಮಾ ದ್ವಾರಕನಾಥ್ ಡೊಂಬಿವಲಿ ಇವರನ್ನು ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು. ಡಾ. ಶಾರದಾ ಗದ್ವಾಲ್ ಅವರು ಕಾರ್ಯಕ್ರಮವನ್ನು ನಿರೂಪಿಸಿದರು. ಶ್ರೀ ಮಂಜುನಾಥ ಎ. ಎನ್. ಅವರು ವಂದಿಸಿದರು.

## ಕನ್ನಡ ಪ್ರಚಾರ ಸಮಿತಿ, ಮುಂಬಯಿ

ಪ್ರತಿಭಾ ಸಂಪನ್ನ ವಿದ್ಯಾರ್ಥಿಗಳನ್ನು ಗೌರವಿಸುವುದು ಸಮಾಜದ ಕರ್ತವ್ಯ. ಅವರೇ ಸಮಾಜದ ಆದರ್ಶಗಳು. ಕನ್ನಡ ಮಾಧ್ಯಮದಲ್ಲಿ ಕಲಿಯುವುದರ ಬಗ್ಗೆ ಕೀಳರಿಮೆ ಬೇಡ. ಕನ್ನಡದಲ್ಲಿ ಕಲಿತು ಜಗತ್ತಿನಲ್ಲಿ ಕೀರ್ತಿ ಬೆಳಗಿದವರು ತುಂಬಾ ಜನರಿದ್ದಾರೆ. ಜಾತಿ ಬೇದವ ಮರೆತು ಪ್ರೀತಿಯಿಂದ ಒಟ್ಟಾಗಿ ದುಡಿಯುವ, ದೀನ ದುರ್ಬಲರಿಗೆ ಸಹಾಯ ಮಾಡುವ, ಜನರಲ್ಲಿ ಸದ್ಭಾವನೆ ಬೆಳೆಸುವ, ಕನ್ನಡದ ಸಂಸ್ಕೃತಿಯ ಬಗ್ಗೆ ಅಭಿಮಾನವಿರಲಿ, ಬಡಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ನೆರವನ್ನು ನೀಡುವ ಪವಿತ್ರಕಾರ್ಯ ಮಾಡೋಣವೆಂದು ಶ್ರೀ ಆದಿಶಕ್ತಿ ಕನ್ನಡ ಶಾಲೆ ಸಂಘದ ಅಧ್ಯಕ್ಷರಾದ ''ಸಮಾಜರತ್ನ'' ಉಳ್ಳೂರುಗುತ್ತು ವಾಮನ ಕೆ. ಶೆಟ್ಟಿಯವರು ಘೋಷಿಸಿದರು. ಶ್ರೀ ಶೆಟ್ಟಿಯವರು ಮುಂಬಯಿಯ ಕನ್ನಡ ಪ್ರಚಾರ ಸಮಿತಿ ಏರ್ಪಡಿಸಿದ್ದ ಮುಂಬಯಿ ಬೋರ್ಡಿನಲ್ಲಿ ಈ ವರ್ಷದ ಎಸ್.ಎಸ್.ಸಿ. ಪರೀಕ್ಷೆಯಲ್ಲಿ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಲ್ಲಿ ಸರ್ವ ಪ್ರಥಮರಾಗಿ ಮೊದಲನೆಯ ರ‍್ಯಾಂಕ್‌ಗಳಿಸಿದ್ದ ಕುಮಾರಿ ಚಂದ್ರಕಲಾ ನೀಲಕಂಠ ಮಾನ್ತ ಹಾಗೂ ಎರಡನೆಯ ರ‍್ಯಾಂಕ್ ಗಳಿಸಿದ್ದ ಕುಮಾರು ಸೌಮ್ಯಶ್ರೀ ಶೇಖರ ಶೆಟ್ಟಿ ಅವರ ಪ್ರತಿಭಾ ಪುರಸ್ಕಾರ ಸಮಾರಂಭದ ಮುಖ್ಯ ಅತಿಥಿ ಸ್ಥಾನದಿಂದ ಮಾತಾಡುತ್ತಿದ್ದರು.

ಕನ್ನಡ ಕಲಿಯುವ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಬೇಕು. ವಿದ್ಯಾರ್ಥಿಗಳ ಪ್ರಗತಿಗೆ ನಮ್ಮ ಸಮಾಜ ಸೇವೆಯ ಲಾಭ ಲಭಿಸಬೇಕು. ಕನ್ನಡ ಸಂಸ್ಕೃತಿಗೆ ಶಿಕ್ಷಣಕ್ಕೆ ಹೆಚ್ಚಿನ ಬೆಂಬಲ ನೀಡಬೇಕು. ವಿದ್ಯೆಯಿಂದ ಬಲವಂತರಾಗಬೇಕು. ನಾವೆಲ್ಲರೂ ಒಂದಾಗಿ ದುಡಿಯಬೇಕು. ಪ್ರತಿಯೊಬ್ಬನು ಸಮಾಜದ ಏಳಿಗೆಗಾಗಿ ಪ್ರಯತ್ನಿಸಬೇಕು ಎಂದು ಪೋವಾಯಿ ಕನ್ನಡ ಸೇವಾ ಸಂಘದ ಪರವಾಗಿ ಸಂಘದ ಸಲಹೆಗಾರ ಖ್ಯಾತ ಸಮಾಜ ಸೇವಕರಾದ ಶ್ರೀನಿವಾಸ ಕರ್ಕೇರ ಅವರು ಮುಖ್ಯ ಅತಿಥಿ ಸ್ಥಾನದಿಂದ ಸಾರಿದರು.

ಬಡತನಕ್ಕೆ ಹೆದರದೆ ದಿಟ್ಟತನದಿಂದ ಜೀವನ ರೂಪಿಸಿಕೊಳ್ಳಬೇಕು. ಅಂತರಂಗದ ಪ್ರತಿಭೆಯನ್ನು ಬೆಳಗಿಸುವ ಪ್ರಯತ್ನಬೇಕು. ಸತತ ಪ್ರಯತ್ನವೇ ಸಫಲತೆಗೆ ಹೆದ್ದಾರಿ; ಹೇಡಿತನವನ್ನು ಧೈರ್ಯದಿಂದ ಗೆಲ್ಲತಕ್ಕದ್ದು. ಕನ್ನಡದ ಪ್ರತಿಭೆಗಳನ್ನು ಗೌರವಿಸುವುದು ನಮ್ಮ ಕರ್ತವ್ಯ. ಬಡವಿದ್ಯಾರ್ಥಿಗಳಿಗೆ ಸಹಾಯ ಮಾಡುವುದು ಪುಣ್ಯದ ಕೆಲಸ; ಅದು ನಮ್ಮ ಧರ್ಮವಾಗಬೇಕು. ವಿಷಮತೆಗಳ ನಡುವೆ ಮೂಡಿ ಅರಳುವ ಪ್ರತಿಭೆಗಳು ಇತರರಿಗೆ ಆದರ್ಶ. ಶ್ರಮ, ತ್ಯಾಗ, ಸತತ ಅಧ್ಯಯನ, ಹಠಸಾಧನೆ, ಎದೆಗುಂದದ ದಿಟ್ಟತನಗಳು ವಿದ್ಯಾರ್ಥಿಗಳಿಗೆ ನಿರತಪ್ರೇರಣಾ ಶಕ್ತಿಯಾಗಿರುತ್ತದೆಯೆಂದು ಮುಂಬಯಿಯ ಕನ್ನಡ ಪ್ರಚಾರ ಸಮಿತಿಯ ಸಂಚಾಲಕ ಡಾ. ಸಂಜೀವ ಶೆಟ್ಟಿಯವರು ಸಮಾರಂಭ ಅಧ್ಯಕ್ಷ ಸ್ಥಾನದಿಂದ ಹೇಳಿದರು. ಸತ್ಕಾರ ಮೂರ್ತಿಗಳಾದ ಕುಮಾರಿ ಚಂದ್ರಕಲಾ ಮಾನ್ತ ಅವರನ್ನು ಉಳ್ಳೂರುಗುತ್ತು ವಾಮನ ಕೆ. ಶೆಟ್ಟಿಯವರೂ ಕುಮಾರಿ

ಸೌಮ್ಯ ಶ್ರೀ ಶೆಟ್ಟಿಯವರನ್ನು ಶ್ರೀನಿವಾಸ ಕರ್ಕೇರ ಅವರನ್ನು ಅನುಕ್ರಮವಾಗಿ ಶಾಲು ಹೊದಿಸಿ ನಿಧಿ ಫಲ ಪುಷ್ಪ ಕಾಣಿಕೆಗಳನ್ನು ನೀಡಿ ಸತ್ಕರಿಸಿದರು. ಡಾ. ಸಂಜೀವ ಶೆಟ್ಟಿಯವರು ಜಯಶ್ರೀಕೃಷ್ಣ ಪರಿಸರ ಪ್ರೇಮಿ ಸಮಿತಿ ವತಿಯಿಂದ ನೆನಪಿನ ಕಾಣಿಕೆ ಗ್ರಂಥಗಳನ್ನಿತ್ತು ಗೌರವಿಸಿದರು. ಶ್ರೀ ಆದಿಶಕ್ತಿ ಕನ್ನಡ ಸಂಘ ಶಾಲೆಯ ವತಿಯಿಂದ ನೆನಪಿನ ಕಾಣಿಕೆಗಳನ್ನು ಉಳ್ಳೂರುಗುತ್ತು ವೇಮನ ಶೆಟ್ಟಿಯವರು ನೀಡಿದರು.

ಇದೇ ಸಂದರ್ಭದಲ್ಲಿ ಪಾರ್ಕ್‌ಸೈಟ್‌ಮ.ನ.ಪಾ. ಕನ್ನಡ ಶಾಲೆಯ ಶಿಕ್ಷಕಿಯರಾದ ಶ್ರೀಮತಿ ಸಮಿ ಎಸ್‌ಂ. ರಾವ್ (ಮುಖ್ಯಸ್ಥೆ) ಶ್ರೀಮತಿ ಸುನಂಧಾ ಎಸ್. ಕಟಗಿ ಅವರನ್ನು ಶಾಲೆಯಲ್ಲಿ ಪುಷ್ಪಗುಚ್ಛಗಳಿಂದ ಗೌರವಿಸಲಾಯಿತು. ಸಮಾರಂಭಕ್ಕೆ ವಿಶೇಷ ಅತಿಥಿಗಳಾಗಿ ಆಗಮಿಸಿದ್ದ ಪೋವಾಯಿ ಕನ್ನಡ ಸೇವಾ ಸಂಘದ ಅಧ್ಯಕ್ಷರಾದ ಅಣ್ಣಪ್ಪ ಪೂಜಾರಿ, ಅಸಲ್ಫಾ ಕನ್ನಡ ಸಂಘದ ಕಾರ್ಯದರ್ಶಿ ಸಿದ್ದು ಶೆಟ್ಟಿ, ಸ್ಥಳೀಯ ಸಮಾಜ ಸೇವಕರಾದ ಜಗದೀಶ್ ಶೆಟ್ಟಿ, ಶ್ರೀಮತಿ ಲಕ್ಷ್ಮೀ ಮತ್ತು ಶ್ರೀ ನೀಲಕಂಠ ಮಾನ್ಯ, ಶ್ರೀಮತಿ ಮತ್ತು ಶ್ರೀ ಶೇಖರ ಶೆಟ್ಟಿಯವರನ್ನು ಗೋರೆಗಾಂವ್ ಕರ್ನಾಟಕ ಸಂಘದ ಮಾಜಿ ಕಾರ್ಯದರ್ಶಿ ಸುರೇಂದ್ರ ಸಾಲಿಯಾನ್ ಅವರುಗಳನ್ನು ಪುಷ್ಪಗುಚ್ಛಗಳಿಂದ ಗೌರವಿಸಲಾಯಿತು. ಸಮಿತಿಯ ಪೋಷಕ, ಖ್ಯಾತ ಸಂಘಟಕ ಸುರೇಂದ್ರ ಮೆಂಡನ್ ಅವರು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ದೇಶಿಸಿ, ಸ್ವಾಗತ ಭಾಷಣ ಮಾಡಿದರು. ಸಮಿತಿ ಸದಸ್ಯರಾದ ರಾಧಾ ಕೋಟ್ಯಾನ್, ಸುನೀತಾ ಮೂಲ್ಯ,ಸಂಗೀತ ಶೆಟ್ಟಿಯವರು ಪ್ರಾರ್ಥನೆ ಹಾಡಿದರು ಹಾಗೂ ಅತಿಥಿಗಳನ್ನು ಪರಿಚಯಿಸಿದರು.

**ಶ್ರೀ ಮಹಾಗಣಪತಿ ಉತ್ಸವ ಭಾವನೆಗಳಿಗೆ ಭಾಷಾ ನಿರ್ಬಂಧವಿಲ್ಲ -- ಪ್ರಾ. ಸೀತಾರಾಮಶೆಟ್ಟಿ**

''ಭಾಷೆಗಳು ಬೇರೆ ಬೇರೆಯಾದರೂ ಭಾವನೆಗಳು ಒಂದೇ ಆಗಿದ್ದರೆ ಭಿನ್ನಾಭಿಪ್ರಾಯ ಬರುವುದಿಲ್ಲ, ಸಂಗೀತವು ಭಾವೈಕ್ಯತೆಗೆ ಹೆಚ್ಚು ಸಹಕಾರಿಯಾಗಿದೆ'' ಎಂದು ಮೈಸೂರು ಸಂಗೀತ ವಿದ್ಯಾಲಯ, ಡೊಂಬಿವಲಿ, ಇವರು ಏರ್ಪಡಿಸಿದ್ದ ಶ್ರೀ ಮಹಾಗಣಪತಿ ಉತ್ಸವದ ಮುಖ್ಯ ಅತಿಥಿಯಾಗಿ, ಮುಂಬಯಿನ ಪ್ರಮುಖ ಕನ್ನಡಿಗರೂ, ಕನ್ನಡ ಸಾಹಿತ್ಯ ಪರಿಷತ್ತು ಮಹಾರಾಷ್ಟ್ರ ಘಟಕದ ಕಾರ್ಯದರ್ಶಿಗಳೂ ಆದ ಪ್ರಾ. ಸೀತಾರಾಮ ಶೆಟ್ಟಿಯವರು ನುಡಿದರು. ಅಂದು ವಿದ್ಯಾಲಯದವರು ಏರ್ಪಡಿಸಿದ್ದ ''ಶ್ರೀ ಗಣಪತಿ ಸಂಗೀತ ಭಾವೈಕ್ಯಮಾಲಿಕಾ'' ಕಾರ್ಯಕ್ರಮದ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿ 12 ಭಾಷೆಗಳಲ್ಲಿ ಶ್ರೀಗಣಪತಿಯ ಕೃತಿಗಳನ್ನು ಆಯ್ದು, ರಾಗ ಸಂಯೋಜಿಸಿ, ವಿದ್ಯಾರ್ಥಿಗಳನ್ನು ತಯಾರು ಮಾಡಿ ಕಾರ್ಯಕ್ರಮವನ್ನು ಸಾದರಪಡಿಸಿದ ವಿದ್ಯಾಲಯದ ಪ್ರಾಂಶುಪಾಲೆ ವಿದುಷಿ ಉಮಾನಾಗಭೂಷಣ್‌ರವರನ್ನು ಅಭಿನಂದಿಸಿ, ಮುಂಬಯಿನ ಎಲ್ಲಾ ಗಣೇಶ ಮಂಡಳಿಗಳು ಮೈಸೂರು ಸಂಗೀತ ವಿದ್ಯಾಲಯದ ಮಾದರಿಯನ್ನು ಅನುಸರಿಸಿದಲ್ಲಿ, ಸಾಂಸ್ಕೃತಿಕ, ಸಾಮಾಜಿಕ ಮತ್ತು ಐಕ್ಯತೆಯ ಪ್ರಗತಿಯಾಗುತ್ತದೆಂದು ಅಭಿಪ್ರಾಯಪಟ್ಟರು.

''ಶ್ರೀ ಗಣಪತಿ ಸಂಗೀತ ಭಾವೈಕ್ಯಮಾಲಿಕಾ'' ಕಾರ್ಯಕ್ರಮದಲ್ಲಿ 12 ಭಾಷೆಗಳಲ್ಲಿ ಶ್ರೀ ಗಣಪತಿಯ ಕೃತಿಗಳನ್ನು ಸಾದರಪಡಿಸಲಾಯಿತು. ಕುಮಾರಿ ಸೌಮ್ಯ ತಂಡದವರು (ಸಂಸ್ಕೃತ, ಕನ್ನಡ) ಕುಮಾರಿ ಮಧುರಾ ರಾನಡೆ (ಹಿಂದಿ, ಮರಾಠಿ) ಸುಬ್ರಹ್ಮಣ್ಯ (ತಮಿಳು) ಗೋಪಾಲಕೃಷ್ಣ (ಮಲೆಯಾಳಂ) ಮಾಸ್ಟರ್ ರವಿಕಿರಣ್ ತಂಡ (ತೆಲುಗು) ಉಮಾನಾಗಭೂಷಣ್ (ಗುಜರಾತಿ) ಸುಮಂಗಲ ಶೆಟ್ಟಿ (ತುಳು) ಪುಟಾಣಿಗಳ ಕೆ.ಜಿ. ತಂಡ (ಇಂಗ್ಲೀಷ್) ಗಣಪತಿಯ ಕೃತಿಗಳನ್ನು ಗಾಯನ ಮಾಡಿದರು. ಈ ವಿನೂತನ ಕಾರ್ಯಕ್ರಮವು ರಸಿಕರ ಅಪಾರ ಮೆಚ್ಚುಗೆ ಗಳಿಸಿತು. ರಾಜೇಶ್ವರಿ (ಪಿಟೀಲು) ವಿನೋದ್ (ಮೃದಂಗ) ಹರೀಶ್ (ಘಟ) ಸುರೇಶ್ ರಾನಡೆ (ತಬಲ)ದಲ್ಲಿ ಉತ್ತಮವಾಗಿ ಸಹಕರಿಸಿದರು.

ವಿದ್ಯಾಲಯದ 20ನೇ ವರ್ಷದ ಮಹೋತ್ಸವದ ಅಂಗವಾಗಿ ಈ ವರ್ಷದ ಉತ್ಸವವನ್ನು 'ಸಂಗೀತ ಗಣಪತಿ' ಉತ್ಸವವಾಗಿ ಆಚರಿಸಬೇಕೆಂಬ ಉದ್ದೇಶಕ್ಕೆ ಪೂರಕವಾಗಿ ಕುಮಾರಿ ಪ್ರಿಯಾ ಮೋಹನ್‌ರವರು ವಾದ್ಯಗಳನ್ನು ನುಡಿಸುವ ಗಣಪತಿಯ ವರ್ಣ ಚಿತ್ರಗಳನ್ನು ರಚಿಸಿ, ನಡೆಸಿದ ಪ್ರದರ್ಶನವು ಎಲ್ಲರನ್ನು ಆಕರ್ಷಿಸಿ ಸಮಾರಂಭಕ್ಕೆ ವೈಶಿಷ್ಟ್ಯತೆಯನ್ನು ತಂದಿತು. ಮುಂದೆ ನಡೆಸುವ 20ನೇ ವರ್ಷದ ಉತ್ಸವದ ಕಾರ್ಯಕ್ರಮಗಳ ವಿವರಣೆಯನ್ನು ನೀಡಿ ಎಲ್ಲರ ಸಹ ಕಾರವನ್ನು ಕೋರಿ, ಕಾರ್ಯನಿರ್ವಾಹಕ ನಾಗಭೂಷಣ್ ಎಲ್ಲರನ್ನು ವಂದಿಸಿದರು.

ವಿಸರ್ಜನೆ, ಮಹಾಪ್ರಸಾದ ನಂತರ ಸಮಾರಂಭ ಮುಕ್ತಾಯವಾಯಿತು.

**ಮುಂಬಯಿ ಕನ್ನಡ ಸಂಘದಲ್ಲಿ**
**ಶ್ರೀ ಗಣೇಶೋತ್ಸವ ಆಚರಣೆ**

ಮಾಟುಂಗದಲ್ಲಿರುವ ಮುಂಬಯಿ ಕನ್ನಡ ಸಂಘದ ಆಶ್ರಯದಲ್ಲಿ ಶ್ರೀ ಗಣೇಶೋತ್ಸವವನ್ನು ವಿವಿಧ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಸಂಘದ ವಾಚನಾಲಯದಲ್ಲಿ ಆಚರಿಸಲಾಯಿತು.

ಈ ವರ್ಷ ಆಗಸ್ಟ್ 22-8-2001ರಿಂದ 24-8-2001ರವರೆಗೆ ಈ ಉತ್ಸವವನ್ನು ಆಚರಿಸಲಾಯಿತು. ತಾ. 22-8-2001ರಂದು ಬೆಳಗ್ಗೆ ವಿಗ್ರಹ ಪ್ರತಿಷ್ಠಾಪನೆ ಆದ ಬಳಿಕ ಮಂಗಳಾರತಿ ನಡೆಯಿತು. ಪೂಜಾ ಕಾರ್ಯಕ್ರಮವನ್ನು ರಾಜೇಂದ್ರ ಗಡಿಯಾರ ದಂಪತಿಗಳು ನಡೆಸಿಕೊಟ್ಟರು. ಅಂದು ಸಂಜೆ ಗಂಟೆ 7-00ರಿಂದ ಡೊಂಬಿವಲಿಯ ಶ್ರೀ ರಂಜನಿ ಸಂಗೀತ ಸಭಾದ ವಿದ್ಯಾರ್ಥಿನಿಯರಿಂದ ಭಕ್ತಿ ಸಂಗೀತ ಕಾರ್ಯಕ್ರಮ ನಡೆಯಿತು. ಈ ದಿನದ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಸಮಾಜ ಸೇವಕ ಲಯನ್ ಕೆ. ಭಾಸ್ಕರ ಶೆಟ್ಟಿಯವರು ಆಗಮಿಸಿ ಕಲಾವಿದರಿಗೆ ಪುಷ್ಪಗುಚ್ಛ ಮತ್ತು ಸಂಭಾವನೆಯನ್ನು ಕೊಟ್ಟು ಸತ್ಕರಿಸಿದರು.

ತಾ. 23-8-2001ರಂದು ಗಂಟೆ 7-00ಕ್ಕೆ ಡೊಂಬಿವಲಿಯ ಶ್ರೀ ಭಾಸ್ಕರ್ ಎಸ್. ಭಟ್ ಇವರಿಂದ ಕೊಳಲು ವಾದನ ಕಾರ್ಯಕ್ರಮ ನಡೆಯಿತು. ಸಂಘದ ಅಧ್ಯಕ್ಷ ಶ್ರೀ ಜಿ. ಎಸ್. ನಾಯಕರು ಅವರಿಬ್ಬರಿಗೂ ಸ್ಮರಣಿಕೆ ಹಾಗೂ ಪುಷ್ಪಗುಚ್ಛ ಕೊಟ್ಟು ಸತ್ಕರಿಸಿದರು.

ತಾ. 24-8-2001ರಂದು ಸಂಜೆ ಡೊಂಬಿವಲಿಯ ಅನುಜಾ ಮಹಿಳಾ ಸಂಘದ ಸದಸ್ಯೆಯರಿಂದ ಭಕ್ತಿ ಸಂಗೀತ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಹಲವಾರು ಸಂಘ ಸಂಸ್ಥೆಗಳಲ್ಲಿ ಪದಾಧಿಕಾರಿಯಾಗಿ ಕೆಲಸ ಮಾಡುತ್ತಿರುವ ಕೆ.ಎಸ್. ಸರಳಾಯ ಆಗಮಿಸಿದ್ದರು. ಅವರು ಭಕ್ತಿ ಸಂಗೀತ ನೀಡಿದ ಅನುಜಾ ಮಹಿಳಾ ಸಂಘದ ಎಲ್ಲಾ ಕಲಾವಿದರಿಗೆ ಪುಷ್ಪಗುಚ್ಛ ನೀಡಿ ಸತ್ಕರಿಸಿದರು. ಅಲ್ಲದೆ ಶ್ರೀ ಗಣೇಶೋತ್ಸವಕ್ಕೆ ಅತೀ ಹೆಚ್ಚು ಉದಾರ ಕಾಣಿಕೆ ಸಂಗ್ರಹಿಸಿದ ಎಸ್.ಕೆ. ಪದ್ಮನಾಭ, ಗುರುರಾಜ್ ಎಸ್. ನಾಯಕ್, ಶ್ರೀಮತಿ ಗಾಯತ್ರಿ ಎಸ್. ರಾಮು, ಬಾಬುರಾಯ ಪ್ರಭು ಹಾಗೂ ಬಿ. ನಾಗಭೂಷಣ್ ಹಾಗೂ ರಂಗವಲ್ಲಿ ಸೇವೆ ಮಾಡಿದ ಶ್ರೀಮತಿ ಜಯಾ ಡಿ. ರೇವಣ್‌ಕರ್‌ರವರಿಗೆ ಸ್ಮರಣಿಕೆ ಕೊಟ್ಟು ಸತ್ಕರಿಸಿದರು.

ಸಂಘದ ಮಾಜಿ ಅಧ್ಯಕ್ಷರಾದ ಡಾ. ಜಿ.ಡಿ. ಜೋಶಿಯವರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಶ್ರೀ ಗಣೇಶೋತ್ಸವವು ಯಶಸ್ವಿಯಾಗಲು ಎಲ್ಲಾ ಸದಸ್ಯರು ಸಹಕರಿಸಿದಂತೆ ಸಂಘವು ನಡೆಸುವ ಇತರ ಕಾರ್ಯಕ್ರಮಗಳಿಗೂ ತನು, ಮನ, ಧನಗಳಿಂದ ಸಹಕಾರ ಕೊಟ್ಟು ಯಶಸ್ವಿಯಾಗಲು ಸಹಕರಿಸಬೇಕೆಂದು ಎಲ್ಲರನ್ನು ಕೇಳಿಕೊಂಡರು.

ಸಂಘದ ಅಧ್ಯಕ್ಷರಾದ ಗುರುರಾಜ್ ಎಸ್. ನಾಯಕರು ಎಲ್ಲರನ್ನು ಸ್ವಾಗತಿಸಿ ಸಂಘವು ನಡೆಸುವ ಚಟುವಟಿಕೆ ಹಾಗೂ ಮುಂದಿನ ಕಾರ್ಯಕ್ರಮಗಳ ಬಗ್ಗೆ ತಿಳಿಸಿದರು.

ವೇದಮೂರ್ತಿ ಅಚ್ಯುತ ಭಟ್ ಹಾಗೂ ನರಸಿಂಹ ಎಸ್. ಭಟ್ ಮತ್ತು ವೈದಿಕರಿಂದ ವೇದಘೋಷ ಆದ ಬಳಿಕ ಮಹಾಮಂಗಳಾರತಿ ನಡೆಸಿ ಮಂಗಳ ಮೂರ್ತಿಯನ್ನು ದಾದರ್ ಸಮುದ್ರ ತೀರದ ಶಿವಾಜಿ ಪಾರ್ಕಿನಲ್ಲಿ ವಿಗ್ರಹ ವಿಸರ್ಜನೆ ನಡೆಸಲಾಯಿತು.

ಸಂಘದ ಜೊತೆ ಕಾರ್ಯದರ್ಶಿ ಶ್ರೀಮತಿ ಗಾಯತ್ರಿ ಎಸ್. ರಾಮುರವರು ಈ ಕಾರ್ಯಕ್ರಮ ಯಶಸ್ವಿಯಾಗಲು ಸಹಕರಿಸಿದ ಎಲ್ಲಾ ಭಕ್ತಾದಿಗಳಿಗೂ ವಂದನಾರ್ಪಣೆ ಮಾಡಿದರು.

## OBITUARY



Sri M.A. Srinivasan, one of our past members and father of Sri M.A.N. Prasad, passed away on the 2nd of September 2001, after a brief spell of illness. He was 88. He leaves behind his wife, son and daughter.

ನಿಮ್ಮ ನೆಚ್ಚಿನ

# ಉದಯವಾಣಿ

ಇದೀಗ

ಹೊಸ ರೂಪ ಹೊಸ ಲಾವಣ್ಯದೊಂದಿಗೆ

- ಹೆಚ್ಚಿಸಿದ ಪುಟಗಳಲ್ಲಿ ಕರ್ನಾಟಕದ ಸಮಗ್ರ ವಾರ್ತೆಗಳು, ಅಂತೆಯೆ ಮುಂಬಯಿ ವಾರ್ತೆಗಳು.
- ಓದುಗರ ಬಯಕೆಯಂತೆ ಮಂಗಳೂರು, ಉಡುಪಿ, ಬೆಳ್ತಂಗಡಿ, ಪುತ್ತೂರು, ಸುಳ್ಯ, ಕೊಡಗು, ಉತ್ತರ ಕರ್ನಾಟಕ ವಾರ್ತಾ ಸಂಚಯಗಳಿಂದ ಪ್ರಾದೇಶಿಕ ಸುದ್ದಿಗಳು.
- ಮಹಾರಾಷ್ಟ್ರದ ಕನ್ನಡಿಗರ ಚಟುವಟಿಕೆಗಳ ವಿವರವಾದ ವರದಿ.
- ಕುತೂಹಲಕಾರಿ ದೈನಿಕ ಧಾರಾವಾಹಿ/‘ಇನ್ಸ್‌ಪೆಕ್ಟರ್ ಗರುಡ ಚಿತ್ರ ಮಾಲಿಕೆ.
- ಶುಕ್ರವಾರದ ಸಂಚಿಕೆ ಜತೆ ಬರುವ ‘ಕಲಾ ವಿಹಾರ’ದಲ್ಲಿ ಕನ್ನಡ ಸಿನಿಮಾ, ನಾಟಕರಂಗ ಅಂತೆಯೆ. ಯಕ್ಷಲೋಕದ ಸಚಿತ್ರ ಬರಹಗಳು.
- ರವಿವಾರದ ‘ಸಾಪ್ತಾಹಿಕ ಸಂಪದ’ದಲ್ಲಿ ಸ್ವಾರಸ್ಯಪೂರ್ಣ ಲೇಖನ, ಕತೆ, ಸಾಹಿತ್ಯ-ಸಂಸ್ಕೃತಿ, ಬಾಲ ಜಗತ್ತು, ‘ನಕ್ಷತ್ರ ಲೋಕ’ದಲ್ಲಿ ಹಿಂದಿ ಚಿತ್ರ ವೃತ್ತಾಂತ, ಕಚಗುಳಿಯಿಡುವ ‘ಗುಟುಕು - ಕುಟುಕು’
- ‘ಅಭಿಮತ’ ಅಂಕಣದಲ್ಲಿ ಓದುಗರೊಂದಿಗೆ ಪ್ರಶ್ನೋತ್ತರ, ಸಾಧಕರ ಪರಿಚಯ, ಸಂದರ್ಶನ.
- ಓದುಗರಿಗೆ ವಿಡಿಯೋಕಾನ್ ವಾಕ್‌ಮನ್, ವಿದ್ಯಾರ್ಥಿಗಳಿಗೆ ನಿಶಿಲ್ಯಾಂಡ್ ವಾಟರ್ ಪಾರ್ಕ್‌ನ ಪಾಸುಗಳನ್ನು ಗೆಲ್ಲಲು ಪ್ರತ್ಯೇಕ ಸ್ಪರ್ಧೆಗಳು.

ನಿಮ್ಮ ಸಲಹೆ, ಸೂಚನೆಗಳಿಗೆ ಸದಾ ಸ್ವಾಗತ.

## MANIPAL MEDIA NETWORK LTD

(PUBLISHERS OF UDAYAVANI, TARANGA, TUSHARA, ROOPATARA, TUNTURU)

616 DALAMAL TOWER, FREE PRESS JOURNAL ROAD,
NARIMAN POINT, MUMBAI-400 021.

Tel.: 287 3043 / 284 5248. Fax : 285 1764

Regn. No. 040015/86
Regn. No. TECH/47-202/MBI-2001
Date of Posting : 20-9-2001

# ಹಳ್ಳಿಗಳ ಸ್ವಾವಲಂಬನ ಶಕ್ತಿಯೇ ನಮ್ಮ ಸ್ವಾತಂತ್ರ್ಯದ ಬಲ.

ಸ್ವತಂತ್ರ ಭಾರತದ ನನಸಿನ ಹಿಂದೆ ಮೈನವಿರೇಳಿಸುವ, ದೇಶ ಭಕ್ತಿಯನ್ನು ಬಡಿದೆಬ್ಬಿಸುವ ಸಹಸ್ರಾರು ಘಟನೆಗಳ ಸರಮಾಲೆಗಳೇ ಇವೆ. ಮಹಾತ್ಮ ಗಾಂಧೀಜಿಯವರಾದಿಯಾಗಿ ಲಕ್ಷೋಪಲಕ್ಷ ಸ್ವಾತಂತ್ರ್ಯ ಯೋಧರ ಮನಕಲಕುವ ತ್ಯಾಗ ಬಲಿದಾನಗಳನ್ನು ಎಳೆಎಳೆಯಾಗಿ ಬಿಡಿಸುವ ದೃಶ್ಯಾವಳಿಗಳೇ ನಮ್ಮ ಮುಂದಿವೆ. ತಾಯ್ನಾಡಿಗಾಗಿ ಇವರೆಲ್ಲರೂ ಸಲ್ಲಿಸಿದ ಆತ್ಮಮೌಲ್ಯ ಫಲವಾಗಿ ಭಾರತವು ಜಗತ್ತಿನ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿ ಹೊರಹೊಮ್ಮಲು ಸಾಧ್ಯವಾಗಿದೆ. ಸ್ವತಂತ್ರ ಭಾರತ ಇಂದು ಜಗತ್ತಿನ ಅತ್ಯಂತ ಪ್ರಭಾವಶಾಲಿ ರಾಷ್ಟ್ರಗಳಲ್ಲಿ ಒಂದು.

ನಮ್ಮ ಇಂದಿನ ಸ್ವಾತಂತ್ರೋತ್ಸವವು ಇಂತಹ ಮಹಾನ್ ತ್ಯಾಗಿಗಳ ಸೇವೆಯನ್ನು ಸ್ಮರಿಸಿ, ಅವರಿಗೆ ನಮ್ಮ ಗೌರವಪೂರ್ಣ ನಮನ ಸಲ್ಲಿಸಲು ಸುಸಮಯ.

ಮಹಾತ್ಮ ಗಾಂಧೀಜಿಯವರ ಗ್ರಾಮ ಪುನರುದ್ಧಾರದ ಕನಸನ್ನು ನನಸಾಗಿಸುವ ದಿಸೆಯಲ್ಲಿ ಕರ್ನಾಟಕ ಇಂದು ಮುಂಚೂಣಿಯಲ್ಲಿದೆ.

ಆಧುನಿಕ ಅಭಿವೃದ್ಧಿಯ ಎಲ್ಲಾ ಆಯಾಮಗಳನ್ನೂ ಹಳ್ಳಿಗಳಿಗೂ ತಲುಪಿಸಿ, ಗ್ರಾಮೀಣ ನೆಮ್ಮದಿಯ ಬದುಕಿಗೆ ಶ್ರಮಿಸುತ್ತಿರುವ ಶ್ರೀ ಎಸ್. ಎಂ. ಕೃಷ್ಣ ನೇತೃತ್ವದ ಕರ್ನಾಟಕ ಸರ್ಕಾರ ಇತರರಿಗೆ ಮಾದರಿಯಾಗಿದೆ.

## ಗ್ರಾಮೀಣ ವಲಯದ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡಿರುವ ಯೋಜನೆಗಳು

### ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್

- ಅಧಿಕಾರ ವಿಕೇಂದ್ರೀಕರಣದ ಪ್ರತಿಫಲವನ್ನು ಮುಂದುವರಿಸುವ ದಿಸೆಯಲ್ಲಿ, ಶ್ರೀ ಸಾಮಾನ್ಯರು ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಗ್ರಾಮಸಭೆಗಳು.
- ಸ್ವಚ್ಛ ಗ್ರಾಮ ಯೋಜನೆಯಡಿ ಗ್ರಾಮೀಣ ಪರಿಸರ ನೈರ್ಮಲ್ಯ ಪಾಲನೆ. ಮೊದಲ ಹಂತದಲ್ಲಿ 1,296 ಗ್ರಾಮಗಳಲ್ಲಿ ಅನುಷ್ಠಾನ.

### ಗ್ರಾಮೀಣ ಕುಡಿಯುವ ನೀರು

- ರಾಜ್ಯದ ಎಲ್ಲಾ ಹಳ್ಳಿಗಳಲ್ಲೂ ದಿನಂಪ್ರತಿ ತಲಾ 55 ಲೀಟರ್ ನೀರು ಸರಬರಾಜಿಗೆ ಕ್ರಮ.

### ಸ್ತ್ರೀಶಕ್ತಿ

- ಗ್ರಾಮೀಣ ಮಹಿಳೆಯರ ಆರ್ಥಿಕ ಪ್ರಗತಿಗಾಗಿ ಅಪೂರ್ವ ಯೋಜನೆ. ತಲಾ 15ರಿಂದ 20 ಮಂದಿ ಮಹಿಳೆಯರನ್ನೊಳಗೊಂಡ 1,00,000 ಸ್ವಸಹಾಯ ಗುಂಪುಗಳ ರಚನೆ, ಪ್ರತಿ ಗುಂಪಿಗೂ ರೂ. 5,000 ಆವರ್ತನಿಧಿ ಹಾಗೂ ರೂ. 500 ಮೌಲ್ಯದ ಕಿಟ್ ನೀಡಿಕೆ.
- 7,85,488 ಸದಸ್ಯರಿಂದ ಈಗಾಗಲೇ 38,534 ಬ್ಯಾಂಕ್ ಖಾತೆಗಳ ಪ್ರಾರಂಭ. ಈ ಖಾತೆಗಳಲ್ಲಿ ರೂ. 8 ಕೋಟಿ ಉಳಿತಾಯ ಹಣ ಜಮಾ.

### ಗ್ರಾಮೀಣ ವಸತಿ

- ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ವತಿಯಿಂದ ಮುಂದಿನ 5 ವರ್ಷಗಳಲ್ಲಿ ಸುಮಾರು 12 ಲಕ್ಷ ಮನೆಗಳ ನಿರ್ಮಾಣ. ಇದಕ್ಕಾಗಿ ರೂ. 213.25 ಕೋಟಿ ಮೀಸಲು. ಅತ್ಯುತ್ತಮ ವಸತಿ ಯೋಜನೆಗಳಿಗಾಗಿ ನಿಗಮಕ್ಕೆ ಪ್ರತಿಷ್ಠಿತ ಹುಡ್ಕೊ ಪ್ರಶಸ್ತಿ.

### ಗ್ರಾಮೀಣ ರಸ್ತೆಗಳು

- ಹತ್ತನೆಯ ಪಂಚವಾರ್ಷಿಕ ಯೋಜನೆಯ ಅಂತ್ಯದೊಳಗಾಗಿ (2007) ರಾಜ್ಯದ ಎಲ್ಲಾ ಹಳ್ಳಿಗಳಿಗೆ ಸಂಪರ್ಕ ಕಲ್ಪಿಸುವ 'ಸರ್ವಋತು ರಸ್ತೆ'ಗಳಿಗಾಗಿ ಜಿಲ್ಲಾ ಗ್ರಾಮೀಣ ರಸ್ತೆಗಳ ಬೃಹತ್ ಯೋಜನೆ.

### ಭೂದಾಖಲೆಗಳ ಗಣಕೀಕರಣ

- 'ಭೂಮಿ' ಯೋಜನೆಯಡಿ 67 ಲಕ್ಷ ರೈತರ ಸುಮಾರು 2 ಕೋಟಿ ಭೂದಾಖಲೆಗಳ ಗಣಕೀಕರಣ.

### ಗ್ರಾಮೀಣ ಶಿಕ್ಷಣ

- ಗ್ರಾಮೀಣ ಯುವಕರಿಗಾಗಿ ಯುವ ಕಾಮ್ ಸೌಲಭ್ಯ.
- ಕರ್ನಾಟಕ ಶಾಲಾ ದತ್ತು ಯೋಜನೆಯಡಿ ಸರ್ಕಾರಿ ಶಾಲೆಗಳನ್ನು ಖಾಸಗಿ ಕ್ಷೇತ್ರದ ಸಂಸ್ಥೆಗಳು, ಟ್ರಸ್ಟ್‌ಗಳು, ಸರ್ಕಾರೇತರ ಸಂಸ್ಥೆಗಳು ಹಾಗೂ ದಾನಿಗಳು ದತ್ತು ತೆಗೆದುಕೊಂಡು ಸರ್ಕಾರದೊಂದಿಗೆ ಅಭಿವೃದ್ಧಿ ಪಡಿಸುವ ಕಾರ್ಯಕ್ರಮ. ಈಗಾಗಲೇ ಪ್ರತಿಷ್ಠಿತ ದತ್ತು ಸಂಸ್ಥೆಗಳಾದ ಅಜಿಂ ಪ್ರೇಂಜಿ ಫೌಂಡೇಶನ್, ಇನ್ಫೋಸಿಸ್ ಫೌಂಡೇಶನ್ ಮುಂತಾದವರ ಸಹಭಾಗಿತ್ವ.

### ಬರಪರಿಹಾರ ಕ್ರಮಗಳು

- ಬರಪೀಡಿತ ಪ್ರದೇಶಗಳಲ್ಲಿ ಕುಡಿಯುವ ನೀರು ಹಾಗೂ ಮೇವು ತುರ್ತಾಗಿ ಒದಗಿಸಲು ರಾಜ್ಯ ಸರ್ಕಾರದಿಂದ ರೂ. 100 ಕೋಟಿ ಬಿಡುಗಡೆ.
- ನೆರೆ ರಾಜ್ಯಗಳಿಗೆ ಮೇವು ಮಾರಾಟದ ಮೇಲೆ ನಿಷೇಧ.
- ನದೀ ತಟಗಳಲ್ಲಿ ನೀರೆತ್ತಲು ಸ್ಥಾಪಿಸಿರುವ ಪಂಪ್ ಸೆಟ್‌ಗಳಿಗೆ ವಿದ್ಯುತ್ ಸರಬರಾಜು.
- ಕಪ್ಪು ಹಾಗೂ ಬೂದು ಪ್ರದೇಶಗಳೆಂದು ಘೋಷಿಸಲಾಗಿರುವ ಪ್ರದೇಶಗಳಲ್ಲೂ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ನೀಡಿಕೆ.

ಇಂದು ಕರ್ನಾಟಕ ಸರ್ಕಾರ ಗ್ರಾಮೀಣ ಜನರ ಪುರೋಭಿವೃದ್ಧಿಗಾಗಿ ತನ್ನ ಸೇವೆ ಮುಡಿಪಾಗಿಟ್ಟಿದೆ. ಅಂತೆಯೇ ಸ್ವಾತಂತ್ರ್ಯ ಯೋಧರ ಆಶೋತ್ತರಗಳನ್ನು ಈಡೇರಿಸಲು ಕರ್ನಾಟಕ ಜನತೆಯೂ ಸಹಕಂಕಣಬದ್ಧರಾಗಿದ್ದಾರೆ.

*55ನೇ ಸ್ವಾತಂತ್ರ್ಯೋತ್ಸವದ ಶುಭಾಶಯಗಳು*

❁ ಕರ್ನಾಟಕ ವಾರ್ತೆ ❁

Edited, Printed & Published by M.A.N. Prasad, On behalf of the Mysore Association, Mumbai. Tel.: 402 46 47
Printed at Aarati Art Printers, Fort, Mumbai-400 001. * 266 33 61 / 266 59 38